# ಇಸೋಪನ ಚರಿತ್ರ

ತ.ನಾ.ಅಬಿಬೀನಭಾವಿ

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

ಪುನರ್ಮುದ್ರಣ ಯೋಜನೆ : ಪುಷ್ಪ – ೧೩

# ಈಸೋಪನ ಚರಿತ್ರ

ತ. ನಾ. ಅಮೀನಭಾವಿ

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

ಇಸೋಪನ ಚರಿತ್ರ

ತ. ನಾ. ಅಮೀನಭಾವಿ

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

ಪುಟಗಳು : ೨೪    ಪ್ರತಿಗಳು : ೫೦೦೦

○

ಆರ್ಥಿಕ ನೆರವು : ಕರ್ನಾಟಕ ರಾಜ್ಯ ಸರಕಾರ

○

**Isopana Charitra**

Life History of Aesope in Kannada by

Ta. Naa. Ameenabhavi

Published in August 1985 by

Siddhaling Pattanshetti

Secretary,

Karnataka Vidyavardhaka Sangh, Dharwad - 1

© Karnataka Vidyavardhaka Sangh, Dharwad

Pages : 24    Copies : 5000

Printed by

Basavaraj Horadi

Lalita Mudranalaya, Market, Dharwad - 1

# ಮೊದಲ ಮಾತು

ಕ್ರಿ. ಶ. ೧೮೯೦ ರಲ್ಲಿ ಸ್ಥಾಪಿತಗೊಂಡ ಕರ್ನಾಟಕ ವಿದ್ಯಾವರ್ಧಕ ಸಂಘವು ಕರ್ನಾಟಕದ ಅತ್ಯಂತ ಪ್ರಾಚೀನವಾದ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಕನ್ನಡದ ಜನನಾಡಿಯನ್ನು ಮಿಡಿದ ತುಂಬ ಮಹತ್ವದ ಸಂಸ್ಥೆಯಾಗಿದೆ. ಕರ್ನಾಟಕದ ಅನೇಕ ಬರೆಹಗಾರರು, ಕವಿಗಳು, ಸಾಮಾಜಿಕ ಕಾರ್ಯಕರ್ತರು ಈ ಸಂಸ್ಥೆಯಿಂದ ಸ್ಫೂರ್ತಿ ಪಡೆದು, ಹೆಸರು ಪಡೆದು ನಾಡಿನ ತುಂಬ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಕೊಂಡಿದ್ದಾರೆ.

ತನ್ನ ಹುಟ್ಟಿನಾರಭ್ಯದಿಂದ ಕರ್ನಾಟಕ ವಿದ್ಯಾವರ್ಧಕ ಸಂಘವು ಭಾಷೆ ಹಾಗೂ ಸಾಹಿತ್ಯದ ಬೆಳವಣಿಗೆಗಾಗಿ ಅವಿರತವಾಗಿ ಶ್ರಮಿಸುತ್ತ ಬಂದಿದೆ. ಹಲವಾರು ಬಗೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರೊಂದಿಗೆ ಧಾರವಾಡವನ್ನು ಕೇಂದ್ರವನ್ನಾಗಿ ಇಟ್ಟುಕೊಂಡು ಸಮಸ್ತ ಕರ್ನಾಟಕದ ಲೇಖಕರನ್ನು, ವಿಚಾರವಂತರನ್ನು ಒಂದು ಗೂಡಿಸಿ ಬೆಳಕಿಗೆ ತರುವ ಕಾರ್ಯವನ್ನು ಸಂಘವು ಮೊದಲಿನಿಂದ ನಿಯಮಿತವಾಗಿ ಮಾಡುತ್ತ ಬಂದಿದೆ.

ಕನ್ನಡ ಬರೆಹಗಾರರ ಬಳಗವನ್ನು ಕಟ್ಟಿ ಅವರಿಂದ ವಿವಿಧ ವಿಷಯಗಳನ್ನು ಕುರಿತು ಗ್ರಂಥಗಳನ್ನು ಬರೆಸಿ ಅಥವಾ ಸ್ಪರ್ಧೆಗಳನ್ನು ಏರ್ಪಡಿಸಿ ಗ್ರಂಥರಚನೆಗೆ ಪ್ರೋತ್ಸಾಹ ನೀಡಿ ತನ್ಮೂಲಕ ಮೂಡಿ ಬಂದ ಕೃತಿಗಳನ್ನು ತುಂಬ ಪರಿಶ್ರಮದಿಂದ ಪ್ರಕಟಿಸಿ ಅವುಗಳನ್ನು ನಾಡಿನ ತುಂಬ ಹರಡಿದ್ದ ಕನ್ನಡಾಭಿಮಾನಿಗಳಿಗೆ ತಲುಪಿಸುವ ಮಹತ್ವದ ಚಾರಿತ್ರಿಕ ಹೊಣೆಗಾರಿಕೆಯನ್ನು ಸಹ ಸಂಘವು ನಿರ್ವಹಿಸಿಕೊಂಡು ಬಂದಿದೆ.

ಈ ನಿಟ್ಟಿನಲ್ಲಿ ಸಂಘವು ಸಾಹಿತ್ಯಿಕ ಜಗತ್ತಿನಲ್ಲಿ ಬಹುಕಾಲ ಉಳಿಯುವಂಥ ನೂರಾರು ಪುಸ್ತಕಗಳನ್ನು ಪ್ರಕಟಿಸಿದ್ದು ಅವು ಸಂಘದ ಚರಿತ್ರೆಯಲ್ಲಿ ಉಳಿಯುವಂಥ ಕೃತಿಗಳು. ಈಚೆಗೆ ಕೆಲವು ವರ್ಷಗಳಿಂದ ಸಂಘದ ಪ್ರಕಾಶನ ವಿಭಾಗವು ನಾಡಿನಲ್ಲಿ ಬೆಳೆದು ಬಂದ ಪ್ರಕಾಶನದ ಪ್ರಸಾರದೊಂದಿಗೆ ಸ್ಪರ್ಧಾತ್ಮಕವಾಗಿ ಹೊಂದಿಕೊಂಡು ಹೋಗಲಾಗದೆ ಪುಸ್ತಕ ಪ್ರಕಟಣೆಯ ತನ್ನ ಕಾರ್ಯವನ್ನು ಸ್ಥಗಿತಗೊಳಿಸಿತ್ತು.

ಈಗ ಅನತಿ ಕಾಲದಲ್ಲಿಯೇ ತನ್ನ ಆಯುಷ್ಯದ ನೂರನೆಯ ವರ್ಧಂತಿ ಉತ್ಸವ ವನ್ನು ಸಂಘವು ಆಚರಿಸಲಿರುವ ಸಂದರ್ಭದಲ್ಲಿ ಪೂರ್ವಭಾವಿಯಾಗಿ ತನ್ನ ಪ್ರಾಚೀನ ಗೌರವವನ್ನು ಮೆರೆದ ಕೆಲವಾರು ಕೃತಿಗಳನ್ನು ಆಯ್ದುಕೊಂಡು ಅವುಗಳ ಮರು ಮುದ್ರಣದ ಯೋಜನೆಯನ್ನು ಹಾಕಿಕೊಂಡಿತು. ಹಿಂದೆ ಸಂಘವು ಪ್ರಕಟಿಸಿದ ಅನೇಕ

ಪುಸ್ತಕಗಳು ಇಂದು ಕಾಲಗರ್ಭದಲ್ಲಿ ಸೇರಿಹೋಗಿ ಅವುಗಳ ಪ್ರತಿಗಳು, ಕೆಲವು ಕೃತಿಗಳ ಹೆಸರುಗಳು ಸಹ ಗೊತ್ತಿಲ್ಲದಂತೆ ಆಗಿಬಿಟ್ಟಿವೆ. ಸಂಘದ ಇಡೀ ಚರಿತ್ರೆಯನ್ನು ಒಟ್ಟು ಗೂಡಿಸಿ ಮಹತ್ವದ ಸಂಶೋಧನ ಗ್ರಂಥವೊಂದನ್ನು ಜವಾಬ್ದಾರಿಯುತ ವಿದ್ವಾಂಸರೊಬ್ಬ ರಿಂದ ಬರೆಸಬೇಕೆಂಬ ವಿಚಾರ ಸಹ ಸಂಸ್ಥೆಗಿದೆ. ಇದಕ್ಕೆ ಅನುಕೂಲಕರವಾಗಿ ಸಹಾಯಕ ವಾಗುವಂಥ ಕಾರ್ಯವೆಂದು ಸದ್ಯ ಉಪಲಬ್ಧವಿದ್ದ ಕೃತಿಗಳಲ್ಲಿ ಹದಿನೈದು ಪುಸ್ತಕಗಳನ್ನು ಆಯ್ದು ಅವುಗಳ ಮರುಮುದ್ರಣದ ಯೋಜನೆಯೊಂದನ್ನು ಹಮ್ಮಿಕೊಂಡು ಅದರ ವಿವರಗಳನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ೧೯೮೪ರ ಪೂರ್ವಾರ್ಧದಲ್ಲಿ ಸಲ್ಲಿಸಲಾಯಿತು. ಆಗ ಇಲಾಖೆಯ ನಿರ್ದೇಶಕರಾಗಿದ್ದ ಶ್ರೀ ನ. ನಾ. ಕಠಾವಿ ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಬಗ್ಗೆ ತಾವು ಇಟ್ಟುಕೊಂಡಿದ್ದ ಅಭಿಮಾನವನ್ನು ಹೃತ್ಪೂರ್ವಕವಾಗಿ ನೆನೆದು, ಸಂಘವು ಹಮ್ಮಿಕೊಂಡ ಈ ಯೋಜನೆ ಯನ್ನು ಯಶಸ್ವಿಗೊಳಿಸುವಲ್ಲಿ ಎಲ್ಲ ರೀತಿಯ ನೆರವು ನೀಡುವುದಾಗಿ ಆಶ್ವಾಸನೆ ಕೊಟ್ಟರು. ಅದರಂತೆ ಯೋಜನೆಯನ್ನು ಒಪ್ಪಿ ಸರಕಾರವು ಹದಿನೈದು ಪುಸ್ತಕಗಳ ಪ್ರಕಾಶನಕ್ಕಾಗಿ ಎರಡು ಲಕ್ಷ ರೂಪಾಯಿಗಳನ್ನು ಅನುದಾನವಾಗಿ ಕೊಡುವಂತೆ ವ್ಯವಸ್ಥೆ ಮಾಡಿದ ಮಾನ್ಯ ಶ್ರೀ ಕಠಾವಿ ಅವರು ಸಂಘವು ಆ ಅನುದಾನವನ್ನು ಸ್ವೀಕರಿಸುವ ಹೊತ್ತಿಗೆ ಭೌತಿಕವಾಗಿ ಇಲ್ಲವಾದದ್ದು ಸಂಘಕ್ಕೆ ಬಹಳ ದೊಡ್ಡ ನೋವು. ಹದಿನೈದು ಕೃತಿಗಳ ಪ್ರಕಾಶನದ ಈ ಸಂದರ್ಭದಲ್ಲಿ ಸಂಘವು ಅತ್ಯಂತ ಕೃತಜ್ಞತೆಯಿಂದ ಶ್ರೀ ಕಠಾವಿ ಅವರನ್ನು ಸ್ಮರಿಸುತ್ತದೆ.

ಸಂಘವು ಮರುಮುದ್ರಣದ ಪ್ರಕಾಶನ ಯೋಜನೆಯ ಮೊದಲ ಹಂತವಾಗಿ ಆಯ್ದುಕೊಂಡ ಹದಿನೈದು ಕೃತಿಗಳು ಇವು :

೧) ಕನ್ನಡ ಶೌರ್ಯಸಾಗರ
೨) ಕನ್ನಡಿಗರ ಜನ್ಮಸಾರ್ಥಕತೆ
೩) ಕರ್ಣಾಟಕ ನರಕಾಸುರ ವಿಜಯವ್ಯಾಯೋಗಂ
೪) ಕರ್ನಾಟಕ ಕಥಾಸರಿತ್ಸಾಗರ
೫) ಮೋಹಿನೀ ಅಥವಾ ನಿಂದಕರ ನಡವಳಿ
೬) ಕನ್ನಡ ಮಾತು ತಲೆಯೆತ್ತುವ ಬಗೆ
೭) ಕಾಲಿದಾಸ ಚರಿತ್ರ
೮) ಕರ್ಣಾಟಕ ಯಯಾತಿನಾಟಕಂ
೯) ಗೃಹವೈದ್ಯಕವು
೧೦) ಭಾರತೀಯ ವಿದುಷಿಯರು
೧೧) ಶ್ರೇಯಃಸಾಧನ
೧೨) ಪಂಡಿತರಾಜ

೧೩) ಇಸೋಪನ ಚರಿತ್ರ
೧೪) ಶ್ರೀ ವಿದ್ಯಾರಣ್ಯ ಸ್ವಾಮಿಗಳು
೧೫) ನರಗುಂದದ ಬಂಡಾಯ

ಕ್ರಮವಾಗಿ ಪ್ರಕಟವಾಗುತ್ತಿರುವ ಈ ಕೃತಿಗಳು ಸಹ ವಿಷಯ ವೈವಿಧ್ಯ, ಆ ಕಾಲದ ಭಾಷಾ ಸೌಂದರ್ಯ, ವ್ಯಾಕರಣ ಹಾಗೂ ಭಾಷಾಶಾಸ್ತ್ರದ ದೃಷ್ಟಿಕೋನ ಹಾಗೂ ಬೆಳೆಯಬೇಕಾಗಿದ್ದ ಒಂದು ಭಾಷೆಯ ನಿರಂತರ ಪರಿಶ್ರಮದ ವಿಕಾಸಶೀಲ ಘಟ್ಟ ಮುಂತಾದ ದೃಷ್ಟಿಯಿಂದ ಪ್ರಮುಖ ಆಯಾಮಗಳನ್ನು ಹೊಂದಿರುವಂಥವು. ಈ ಕೃತಿಗಳನ್ನು ಆಗ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕಾಗಿ ರಚಿಸಿಕೊಟ್ಟ ಆಯಾ ಲೇಖಕರು ತಮ್ಮ ಕೃತಿಗಳ ಸ್ವಾಮ್ಯವನ್ನು ಸಂಘಕ್ಕೆ ನೀಡಿದ್ದು ಈಗ ಈ ಕೃತಿಗಳ ಏಕಸ್ವಾಮ್ಯ ಹೊಂದಿದ ಸಂಘವು ಆ ಎಲ್ಲ ಲೇಖಕರನ್ನು ಕೃತಜ್ಞತೆಯಿಂದ ಸ್ಮರಿಸುತ್ತದೆ.

ಈ ಕೃತಿಗಳಲ್ಲಿ ಯಾವುದೇ ಬದಲಾವಣೆ ಅಥವಾ ಹೊಸ ಸೇರ್ಪಡೆ ಇತ್ಯಾದಿ ಮಾಡದೆ ಅವು ಇದ್ದ ಮೂಲ ಸ್ಥಿತಿಯಲ್ಲಿಯೇ ಮರುಮುದ್ರಿಸಲಾಗಿದೆ. ಐತಿಹಾಸಿಕ ದೃಷ್ಟಿಯಿಂದ ಈ ಕೃತಿಗಳನ್ನು ಅಭ್ಯಸಿಸುವವರಿಗೆ ಯಾವ ದೃಷ್ಟಿಯಿಂದಲೂ ವ್ಯತ್ಯಯ ಬರದ ಹಾಗೆ ಇವುಗಳ ಮೂಲ ಸ್ವರೂಪವನ್ನು ಉಳಿಸಿಕೊಳ್ಳಲಾಗಿದೆ. ಈಗ ಬೇರೆ ಎಲ್ಲಿಯೂ ಉಪಲಬ್ಧವಿರದ ಈ ವಿರಳ ಕೃತಿಗಳನ್ನು ಹೀಗೆ ಅವು ಇದ್ದ ಸ್ವರೂಪದಲ್ಲಿಯೇ ಉಪಲಬ್ಧಗೊಳಿಸಿ ಅವುಗಳ ಆಯುಷ್ಯ ಹಾಗೂ ಅಸ್ತಿತ್ವಗಳನ್ನು ಇನ್ನಷ್ಟು ಸುಭದ್ರಗೊಳಿಸುವ ನಿಟ್ಟಿನಲ್ಲಿ ಈ ಮರುಮುದ್ರಣಗಳು ಜನತೆಗೆ ಪ್ರಯೋಜನಕಾರಿಯಾದರೆ ಸಂಘದ ಶ್ರಮ ಸಾರ್ಥಕವಾದಂತೆ.

ಈ ಕೃತಿಗಳನ್ನು ಪ್ರಕಟಿಸಲು ಆರ್ಥಿಕ ನೆರವು ನೀಡಿದ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನಾವು ವಿಶೇಷವಾಗಿ ಕೃತಜ್ಞರಾಗಿದ್ದೇವೆ. ಈ ಹದಿನೈದು ಕೃತಿಗಳಲ್ಲದೆ ಕರ್ನಾಟಕ ವಿದ್ಯಾವರ್ಧಕ ಸಂಘದ ಇನ್ನಿತರ ಎಲ್ಲ ಕೃತಿಗಳನ್ನು ಹೀಗೆ ಮರುಮುದ್ರಣ ಮಾಡಿ ನಾಡಿನ ತುಂಬ ಅವು ವ್ಯಾಪಿಸುವಂತೆ ಮಾಡುವ ಉದ್ದೇಶ ನಮಗಿರುವುದರಿಂದ ಇನ್ನು ಮುಂದೆಯೂ ಕರ್ನಾಟಕ ಸರಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಮ್ಮ ಈ ಬೃಹತ್ ಯೋಜನೆ ಯಶಸ್ವಿಯಾಗಿ ಮುಂದುವರಿಯುವಂತೆ ನಮಗೆ ಆರ್ಥಿಕ ನೆರವನ್ನು ನೀಡಿ ಇಂಥ ಒಂದು ಐತಿಹಾಸಿಕ ಉಪಕ್ರಮದ ಮೂಲಕ ಪ್ರಕಾಶಿತಗೊಳ್ಳುವ ಕೃತಿಗಳ ಪುನರುಜ್ಜೀವನಕ್ಕೆ ಕಾರಣವಾಗಿ ನಮ್ಮ ಬೆನ್ನು ತಟ್ಟಲಿ ಎಂದು ಆಶಿಸುತ್ತೇವೆ.

ಪ್ರಸ್ತುತ ಕೃತಿ **ಇಸೋಪನ ಚರಿತ್ರ** ಶ್ರೀ ತ. ನಾ. ಅಮೀನಭಾವಿ ಅವರು ವಿಶೇಷವಾಗಿ ಚರಿತ್ರೆ ಹಾಗೂ ನೀತಿಗಳನ್ನು ಮೇಳವಿಸಿ ರಚಿಸಿದ ಕೃತಿ. ಕರ್ನಾಟಕ ವಿದ್ಯಾವರ್ಧಕ ಸಂಘದ ವಾಗ್ಭೂಷಣ ಗ್ರಂಥಮಾಲೆಯ ೭೬ನೆಯ ಪುಷ್ಪವಾಗಿ ೧೯೨೦ರಲ್ಲಿ

ಮೊದಲು ಪ್ರಕಟವಾಗಿದ್ದ ಈ ಪುಸ್ತಕದ ಬೆಲೆ ಆಗ ಮೂರು ಆಣೆಯಿತ್ತು. ಇಸೋಪನು ಹೇಳಿದ ನೀತಿ ಕತೆಗಳು ಮೊದಲಿನಿಂದಲೂ ಮಕ್ಕಳಿಗೆ ನೀತಿಬೋಧೆ ಹಾಗೂ ಬದುಕಿನ ಮರ್ಮ ತಿಳಿಸಲು ಪ್ರಸಿದ್ಧವಾಗಿದ್ದರೂ ಅವುಗಳ ಸೃಷ್ಟಿಕರ್ತನಾದ ಇಸೋಪನ ಬಗೆಗೆ, ಮೂಲ ವ್ಯಕ್ತಿಯನ್ನು ಕುರಿತು ಶ್ರೀ ಅಮೀನಭಾವಿಯವರು ಈ ಹೊತ್ತಿಗೆ ಬರೆದದ್ದು ಸ್ತುತ್ಯ ಕಾರ್ಯವಾಗಿತ್ತು. ಕರ್ನಾಟಕ ವಿದ್ಯಾವರ್ಧಕ ಸಂಘದ ಆಗಿನ ಪ್ರಕಟಣೆಗಳಲ್ಲಿ ತುಂಬ ಪ್ರಚಾರದಲ್ಲಿದ್ದು ಬೇಗನೆ ಮಾರಾಟವಾಗಿದ್ದ ಈ ಹೊತ್ತಿಗೆ ಈಗಲೂ ಹಾಗೆಯೇ ಜನಪ್ರಿಯವಾಗುವುದೆಂಬ ವಿಶ್ವಾಸ ನಮಗಿದೆ.

ಕರ್ನಾಟಕದ ಜನತೆ, ಸಾಹಿತ್ಯಾಸಕ್ತ ಸ್ನೇಹಿತರು, ಗ್ರಂಥಾಲಯಗಳ ಅಧಿಕಾರಿಗಳು, ಪ್ರಾಚೀನ ಕೃತಿ ಸಂಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಈ ಕೃತಿಗಳ ಪ್ರತಿಗಳನ್ನು ಕೊಂಡು ಆರ್ಥಿಕವಾಗಿ ಸಹಾಯ ಮಾಡಿದಾಗ ಇನ್ನುಳಿದ ಕೃತಿಗಳನ್ನು ಬೇಗನೆ ಬೆಳಕಿಗೆ ತರುವ ನಮ್ಮ ಯೋಜನೆ ಬಹು ಬೇಗನೆ ಕಾರ್ಯಗತಗೊಳ್ಳುವಲ್ಲಿ ಸಂದೇಹವಿಲ್ಲ.

ಈ ಕೃತಿಯ ಪ್ರಕಟಣೆಗೆ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷವಾಗಿ ಸಹಾಯ ಸಲ್ಲಿಸಿದ ಎಲ್ಲ ಆತ್ಮೀಯರಿಗೆ ಹಾಗೂ ಮುದ್ರಣಾಲಯದ ಸಿಬ್ಬಂದಿಗೆ ಸಂಘದ ಕೃತಜ್ಞತೆಗಳು.

| | | |
|---|---|---|
| ಧಾರವಾಡ | **ಸಿದ್ಧಲಿಂಗ ಪಟ್ಟಣಶೆಟ್ಟಿ** | **ಪಾಟೀಲ ಪುಟ್ಟಪ್ಪ** |
| ೧–೮–೧೯೮೫ | ಪ್ರಧಾನ ಕಾರ್ಯದರ್ಶಿ | ಅಧ್ಯಕ್ಷರು |

# ಇಸೋಪನ ಚರಿತ್ರ

# ಇಸೋಪನ ಚರಿತ್ರ

ನೈತಿಕ ಶಿಕ್ಷಣವನ್ನು ಕೊಟ್ಟು ನಡವಳಿಕೆಯನ್ನು ತಿದ್ದುವ ಅನೇಕ ಸಾಧನಗಳಲ್ಲಿ ಉದಾಹರಣಗಳಿಂದ ನೀತಿಯನ್ನು ಬೋಧಿಸುವದು ಎಲ್ಲಕ್ಕೂ ಶ್ರೇಷ್ಠವಾದದ್ದು. "ನೀತಿಯುದಾಹೃತಿ ಮುಖದಿಂದಾ ತರುಣರ ಚಿತ್ತದಲ್ಲಿ ನೆಲೆಗೊಳ್ಳುಂ" ಎಂದು ಕವಿ ಶ್ರೇಷ್ಠನಾದ ಕಾಲಿದಾಸನ ಉಕ್ತಿಯುಂಟು; ಅತಿಪ್ರಾಚೀನ ಕಾಲದಲ್ಲಿ ನಮ್ಮ ದೇಶದ ಋಷಿಗಳು ವೇದಾಂತ ಶಾಸ್ತ್ರದ ಗೂಢವಾದ ಹಲಕೆಲವು ತತ್ವಗಳನ್ನೂ ಉದಾತ್ತವಾದ ನೀತಿಯ ತತ್ವಗಳನ್ನೂ ಚಿಕ್ಕ ಪುಟ್ಟ ಕಥೆಗಳಿಂದ ಪರರ ಮನಸ್ಸಿನಲ್ಲಿ ಬಿಂಬಿಸುವಂತೆ ಬರೆದಿದ್ದಾರೆ. ವಿಷ್ಣುಶರ್ಮನೆಂಬ ಮಹಾಪಂಡಿತನು ರಾಜಪುತ್ರರಿಗೆ ರಾಜನೀತಿಯ ತತ್ವಗಳನ್ನು ಉಪದೇಶ ಮಾಡುವದಕ್ಕಾಗಿ ಕಾಗೆ, ಇಲಿ, ಪಾರಿವಾಳ, ಸಿಂಹ, ನರಿ, ಎತ್ತು ಮೊದಲಾದ ಪ್ರಾಣಿಗಳನ್ನುದ್ದೇಶಿಸಿ ಕಥೆಗಳನ್ನು ಪಂಚತಂತ್ರವೆಂಬ ಗ್ರಂಥದಲ್ಲಿ ವಿವರಿಸಿದ್ದಾನೆ. ಇದೇ ತತ್ವವನ್ನು ಅನುಸರಿಸಿ ಪ್ರಾಚೀನ ಕಾಲಕ್ಕೆ ಗ್ರೀಸ ದೇಶದಲ್ಲಿ ಆಗಿ ಹೋದ ಇಸೋಪನೆಂಬ ನೀತಿಜ್ಞನು ವಿಷ್ಣುಶರ್ಮನಂತೆ ಅನೇಕ ಪ್ರಾಣಿಗಳನ್ನುದ್ದೇಶಿಸಿ ಕಥೆಗಳನ್ನು ರಚಿಸಿ ಉದಾತ್ತವಾದ ನೀತಿಯ ತತ್ವಗಳನ್ನೂ ವ್ಯವಹಾರ ಜ್ಞಾನವನ್ನೂ ಬೋಧಿಸಿರುವನು. ಸದ್ಯಕ್ಕೆ ಈ ಕಥೆಗಳು ಎಲ್ಲ ದೇಶಗಳಲ್ಲಿಯೂ ಎಲ್ಲ ಭಾಷೆಗಳಲ್ಲಿಯೂ ಅಚ್ಚಾಗಿರುತ್ತವೆ. ಚಿಕ್ಕ ಮಕ್ಕಳೂ ಕೂಡ ಒಳ್ಳೇ ಅಕ್ಕರೆಯಿಂದ ಈತನ ನೀತಿಯ ಕಥೆಗಳನ್ನು ಓದುತ್ತಾರೆ. ಲೇಖಕರಿಗೂ ವ್ಯಾಖ್ಯಾನಕಾರರಿಗೂ ಎಷ್ಟೋ ಪ್ರಸಂಗಗಳಲ್ಲಿ ಈತನ ಕಥೆಗಳು ಸಮಯೋಚಿತ ದೃಷ್ಟಾಂತಗಳಾಗಿ ಉಪಯೋಗಿಸಲ್ಪಡುತ್ತವೆ. ಸಾರಾಂಶ ಆಬಾಲವೃದ್ಧರಿಗೆ ಇಸೋಪನ ನೀತಿಯ ಕಥೆಗಳು ಮನೋರಂಜನಕರವಾಗಿಯೂ, ಬೋಧಪ್ರದವಾಗಿಯೂ ಇರುವವಲ್ಲದೆ ಅವುಗಳಲ್ಲಿ ಅಡಕವಾಗಿರುವ ನೀತಿಯ ತತ್ವವು ಒಳ್ಳೇ ಮನನ ಮಾಡುವಂತಹದಿರುವದು. ಇಸೋಪನು ಕೆಲವು ಪ್ರಾಣಿಗಳ ಸ್ವಾಭಾವಿಕವಾದ ಗುಣಗಳನ್ನು ಒಳ್ಳೇ ಹಂಚಿಕೆಯಿಂದ ಉಪಯೋಗಿಸಿಕೊಂಡು ಕಥೆಗಳನ್ನು ರಚಿಸಿರುವನು; ಆ ಪ್ರಾಣಿಗಳಲ್ಲಿ ಮುಖ್ಯವಾಗಿ ಸಿಂಹನ ಧೈರ್ಯ, ಪೌರುಷ; ನರಿಯ ಜಾಣತನ, ತೋಳನ ಕ್ರೂರತನ, ಕತ್ತೆಯ ಸಹನಶೀಲತೆ, ಹೋರಿಯ ಬಲ, ಕುರಿ ಆಡು ಕಪ್ಪೆಗಳ ಬಲಹೀನತೆ; ತಿಳಿಗೇಡಿತನ ಈ ಮುಂತಾದವುಗಳು ಆಯಾ ಕಥೆಗಳಲ್ಲಿ ಸ್ಪಷ್ಟವಾಗಿರುವವು. ಅದರಿಂದ ಆ ಕಥೆ

ಗಳನ್ನು ಓದುವವರ ಮನಸಿನಲ್ಲಿ ನೀತಿಯು ಸಹಜವಾಗಿ ಬರುವದು. ಇಂಥ ಅಮೂಲ್ಯವಾದ ಕಥೆಗಳನ್ನು ರಚಿಸಿದ ಇಸೋಪನು ಯಾರು ? ಅವನು ಎಲ್ಲಿ, ಎಂದು ಹುಟ್ಟಿದನು ? ಇಂಥ ಕಥೆಗಳನ್ನು ರಚಿಸಲಿಕ್ಕೆ ಯಾವ ಕಾರಣಗಳು ಸಂಭವಿಸಿದವು ? ಇತ್ಯಾದಿ ಅವನ ಚರಿತ್ರದೊಳಗಿನ ಸಂಗತಿಗಳು ಮಾತ್ರ ಬಹು ಸ್ವಲ್ಪ ಜನರಿಗೆ ಗೊತ್ತಿರುವವು. ಯಾಕಂದರೆ ಪ್ರಾಚೀನ ಕಾಲದ ಇಂಥ ಮಹಾತ್ಮರ ಚರಿತ್ರವು ಸಂಪೂರ್ಣವಾಗಿ ಎಲ್ಲಿಯೂ ಉಪಲಬ್ಧವಾಗಿರುವದಿಲ್ಲ. ಇದ್ದ ಅಲ್ಪ ಸ್ವಲ್ಪ ಭಾಗವು ಪ್ರಸಿದ್ಧವಾಗಿಲ್ಲ; ಆದರೆ ಇಂಥ ಮಹಾತ್ಮನ ಚರಿತ್ರವನ್ನು ತಿಳಕೊಳ್ಳಬೇಕೆಂಬ ಜಿಜ್ಞಾಸೆಯಿಂದ ಪ್ರಯತ್ನ ಮಾಡುತ್ತಿರಲು ನನಗೆ ದೊರೆತ ಹಲಕೆಲವು ಸಂಗತಿಗಳನ್ನು ನಮ್ಮ ವಾಚಕರ ಸಲುವಾಗಿ ಇಲ್ಲಿ ಕೊಡುವೆನು.

ಇಸೋಪನು ಎಂದು ಹುಟ್ಟಿದನೆಂಬುದು ನಿಶ್ಚಯವಾಗಿ ತಿಳಿಯುವದಿಲ್ಲ. ಆದರೆ ಕ್ರಿಸ್ತನು ಹುಟ್ಟುವದಕ್ಕಿಂತ ಸುಮಾರು ೬೨೦ ವರ್ಷಗಳಿಗಿಂತ ಮುಂಚೆ ಇದ್ದನೆಂದು ತಿಳಿಯುತ್ತದೆ. ಇವನು ಗ್ರೀಸ ದೇಶದಲ್ಲಿ ಫ್ರೀಜಿಯಾ ಪ್ರಾಂತದ ಮುಖ್ಯ ಪಟ್ಟಣವಾದ ಕಾಟೀಯಮ ಎಂಬ ಪಟ್ಟಣದಲ್ಲಿ ಹುಟ್ಟಿದನು. ಈತನ ತಾಯಿ-ತಂದೆಗಳಿಬ್ಬರೂ ಗುಲಾಮರಾಗಿದ್ದದರಿಂದ ಈತನು ಹುಟ್ಟಾ ಗುಲಾಮನಾಗಿದ್ದಂತಾಯಿತು. ಆಗಿನ ಕಾಲದ ಸುಧಾರಿಸಿದ ರಾಷ್ಟ್ರಗಳಲ್ಲಿಯೂ ಕೂಡ ಗುಲಾಮರನ್ನು ಮಾಡಿಕೊಳ್ಳುವದೂ, ಅವರನ್ನು ಮನೆಯಲ್ಲಿ ದುಡಿಸಿಕೊಳ್ಳುವದೂ, ದನಕರುಗಳಂತೆ ಅವರನ್ನು ಪರರಿಗೆ ಮಾರಾಟ ಮಾಡುವದೂ ಸರ್ವಮಾನ್ಯವಾದ ನಡಾವಳಿಯಾಗಿತ್ತು. ಇದಲ್ಲದೆ ಸಾಕ್ರೇತೀಸನಂಥ ತತ್ವಜ್ಞಾನಿಗಳೂ ಕೂಡ 'ಗುಲಾಮರಾಗಿರುವದು' ದೇವರು ದಯಪಾಲಿಸಿದ ಸ್ಥಿತಿಯೆಂತಲೂ, ಕೆಲವು ಜನರು ಯಾವಾಗಲೂ ಗುಲಾಮರಾಗಿಯೇ ಇರಲಿಕ್ಕೆ ಬೇಕೆಂತಲೂ ಪ್ರತಿಪಾದಿಸುತ್ತಿದ್ದರು. ಇಸೋಪನ ತಾಯಿ-ತಂದೆಗಳ ಒಡೆಯನೇ ಇಸೋಪನಿಗೂ ಒಡೆಯನಾಗಿದ್ದನು.

ಯಾವ ದೇಶದಲ್ಲಿಯೇ ಆಗಲಿ, ಅತಿ ಪ್ರಾಚೀನ ಕಾಲಕ್ಕೆ ಚರಿತ್ರಗಳನ್ನು ಬರೆದಿಡುವ ಸಾಂಪ್ರದಾಯವು ಕಡಿಮೆ; ಹಲಕೆಲವರು ದೇಶದಲ್ಲಿ ಪ್ರಸಿದ್ಧರಾದ ವ್ಯಕ್ತಿಗಳ ಚರಿತ್ರವನ್ನು ಅವರು ಮೃತಪಟ್ಟ ಬಹುಕಾಲದ ಮೇಲೆ ಗೊತ್ತಾದಷ್ಟು ಬರೆದಿರುವರು; ಆದರೆ ಇಸೋಪನು ಸ್ವತಃ ಗುಲಾಮನು; ಇವನ ತಾಯಿ-ತಂದೆಗಳು ಗುಲಾಮರು; ಈತನ ಬಾಲ್ಯದ ಸಂಗತಿಗಳು ಯಾರಿಗೆ ಹೇಗೆ ಗೊತ್ತಾಗಬೇಕು ? ಮುಂದೆ ಇವನು ತನ್ನ ಒಡೆಯನ ಕೆಲಸಗಳನ್ನು ಮಾಡಹತ್ತಿದಾಗಿನ ಒಂದೆರಡು ಸಂಗತಿಗಳು ಗೊತ್ತಾಗಿರುವವು.

ಇಸೋಪನು ಹುಟ್ಟಿದಾಗಿನಿಂದ ಒಳ್ಳೇ ಕುರೂಪಿಯಾಗಿದ್ದರಿಂದ ಅವನನ್ನು ನೋಡಿದ ಕೂಡಲೆ ಯಾರಿಗಾದರೂ ಹೆದರಿಕೆ ಬರುತ್ತಿತ್ತು. ಹುಡುಗರೂ ಹೆಂಗಸ

ರಂತೂ ಅವನನ್ನು ಕಂಡ ಕೂಡಲೆ ಹೆದರಿಗಟ್ಟಿಯಾಗಿ ಕಣ್ಣುಗಳನ್ನು ಮುಚ್ಚಿಕೊಳ್ಳುತ್ತಿದ್ದರೆಂದು ಹೇಳುತ್ತಾರೆ. ಇಸೋಪನು ಸ್ವಲ್ಪ ದೊಡ್ಡವನಾದ ಮೇಲೆ ಅವನ ಕುರೂಪಿಯಾದ ಮುಖಮುದ್ರೆಯು ತನ್ನ ಹೆಂಡಿರು ಮಕ್ಕಳ ದೃಷ್ಟಿಗೆ ಬೀಳಬಾರದೆಂದು ಅವನ ಒಡೆಯನು ಅವನನ್ನು ತನ್ನದೊಂದು ದೂರದ ಹೊಲವನ್ನು ಕಾಯುಲಿಕ್ಕೆ ನೇಮಿಸಿದನು. ಇಸೋಪನು ಹೊಲವನ್ನು ಕಾಯುತ್ತಿರುವಾಗ ಒಂದಾನೊಂದು ದಿವಸ ಹೊಲದ ಸ್ಥಿತಿಯನ್ನು ನೋಡಬೇಕೆಂದು ಒಡೆಯನು ಅಲ್ಲಿಗೆ ಬಂದನು; ಕೂಡಲೆ ಹೊಲವನ್ನು ಮಾಡುವ ರೈತನು ಅವನಿಗೆ ಕಾಣಿಕೆಯಾಗಿ, ಒಳ್ಳೇ ಉತ್ಕೃಷ್ಟವಾದ ಅಂಜೀರುಗಳನ್ನು ತಂದುಕೊಟ್ಟನು. ಒಡೆಯನು ಅವುಗಳನ್ನು ಸ್ವೀಕರಿಸಿ, ತನ್ನ ಸಂಗಡ ಬಂದ ಆಳಿನ ಹತ್ತರ ಕೊಟ್ಟು, "ನಾನು ಸ್ನಾನ ಮಾಡಿ ಬರುವ ತನಕ ಈ ಹಣ್ಣುಗಳು ನಿನ್ನ ಹತ್ತಿರ ಇರಲಿ" ಎಂದು ಹೇಳಿದನು. ಒಡೆಯನು ಸ್ನಾನಕ್ಕೆ ಹೋದಾಗ ಆ ಅಂಜೀರುಗಳ ರೂಪವನ್ನೂ ಬಣ್ಣವನ್ನೂ ಕಂಡು ಆ ಆಳಿನ ಬಾಯಿಗೆ ಜುಳುಜುಳು ನೀರು ಬಿಟ್ಟವು; ಕೂಡಲೆ ಅವನು ಹಿಂದೆ ಮುಂದೆ ನೋಡದೆ, ಆ ಎಲ್ಲ ಅಂಜೀರುಗಳನ್ನು ತಿಂದುಬಿಟ್ಟನು. ಕಟ್ಟಕಡೆಯ ಅಂಜೀರು ಹೊಟ್ಟೆಯಲ್ಲಿ ಹೋದ ಮೇಲೆ—ಒಡೆಯನು ಬಂದು ಅಂಜೀರುಗಳನ್ನು ಕೊಡೆಂದು ಕೇಳಿದರೆ ಏನು ಉತ್ತರವನ್ನು ಕೊಡಲಿ ಎಂದು ಅವನ ಮನಸಿನಲ್ಲಿ ವಿಚಾರವು ಹುಟ್ಟಿತು. ಮನುಷ್ಯನು ತನ್ನದೊಂದು ಕಳ್ಳತನವನ್ನು ಮುಚ್ಚಲಿಕ್ಕೆ ಮತ್ತೊಂದು ಕಳ್ಳದಾರಿಯನ್ನು ಹುಡುಕುವನು. ಅದನ್ನು ಮುಚ್ಚಲಿಕ್ಕೆ ಇನ್ನೊಂದು ಸುಳ್ಳು ಹಂಚಿಕೆಯನ್ನು ತೆಗೆಯುವನು. ಇದೇ ಮೇರೆಗೆ ಆ ಆಳುಮಗನು ತಾನು ಮಾಡಿದ ತಪ್ಪನ್ನು ಯಾರ ಮೇಲಾದರೂ ಹಾಕಿ ಬಿಡಬೇಕೆಂದು ಆಲೋಚಿಸುತ್ತಿರಲು, ಕರ್ಮಧರ್ಮಸಂಯೋಗದಿಂದ ಇಸೋಪನು ತನ್ನ ಒಡೆಯನಿಗೆ ಭೆಟ್ಟಿಯಾಗಿ ಮುಜುರೆ ಮಾಡಿ ಹೋಗಬೇಕೆಂದು, ಅಲ್ಲಿಗೆ ಬಂದನು. ಅವನನ್ನು ಕಂಡ ಕೂಡಲೆ ಆ ಮೋಸಗಾರನಾದ ಆಳುಮಗನು "ಈ ಸಂಧಿಯು ಚೆನ್ನಾಗಿರುವದು" ಎಂದು ಯೋಚಿಸಿ, ಈ ಗುಲಾಮನು ನಾವು ಬೇಡ ಬೇಡೆನ್ನುತ್ತಿರಲು, ಎಲ್ಲ ಅಂಜೀರುಗಳನ್ನು ತಿಂದುಬಿಟ್ಟನೆಂದು ಹೇಳಿಬಿಟ್ಟರಾಯಿತೆಂದು ನಿಶ್ಚಯಿಸಿ ಒಡೆಯನು ಬಂದ ಕೂಡಲೆ ಅದರಂತೆ ಹೇಳಿಬಿಟ್ಟನು. ಅದರಿಂದ ಒಡೆಯನು ಇಸೋಪನ ಮೇಲೆ ಬಹಳ ಸಿಟ್ಟಾಗಿ, ಅವನಿಗೆ ಕಠಿಣವಾದ ಶಿಕ್ಷೆಯನ್ನು ಕೊಡಬೇಕೆಂದು ನಿಶ್ಚಯಿಸಿದನು. ಇಸೋಪನು ಕೆಲವು ಹೊತ್ತಿನವರೆಗೆ ಸ್ತಬ್ಧವಾಗಿ ನಿಂತುಕೊಂಡು ಆ ಬಳಿಕ ಒಡೆಯನ ಕಾಲಮೇಲೆ ಬಿದ್ದು,— ಒಡೆಯರೆ, ನನ್ನಿಂದ ಈ ಅಪರಾಧವಾಗಿದೆ ಎಂದು ತಮಗೆ ಕಂಡುಬಂದರೆ, ನನಗೆ ಅವಶ್ಯವಾಗಿ ಶಿಕ್ಷೆಯನ್ನು ಮಾಡತಕ್ಕದ್ದು; ಆದರೆ ಶಿಕ್ಷೆಯನ್ನು ಕೊಡುವದಕ್ಕಿಂತ ಮೊದಲು ನನಗೆ ಅರ್ಧ ತಾಸು ಅವಕಾಶವನ್ನು ಕೊಡತಕ್ಕದ್ದು; ಅಷ್ಟರಲ್ಲಿ ನಾನು ನಿರಪರಾಧಿಯಾಗಿದ್ದೇನೆಂದು ಸಿದ್ಧ ಮಾಡಿ ತೋರಿಸುತ್ತೇನೆ. ಒಂದು ವೇಳೆ ನಾನು ಸಿದ್ಧ ಮಾಡಿ ತೋರಿಸದಿದ್ದರೆ, ಇಮ್ಮಡಿ ಶಿಕ್ಷೆಯನ್ನು ಹೊಂದಲಿಕ್ಕೆ ನಾನು ಆನಂದದಿಂದ ಒಪ್ಪಿಕೊಳ್ಳುತ್ತೇನೆ" ಎಂದು ಹೇಳಿ

ಕೊಂಡನು. ಇಸೋಪನ ಮಾತುಗಳನ್ನು ಕೇಳಿ ಒಡೆಯನ ಮನಸಿನಲ್ಲಿ ದಯೆಯು ಉತ್ಪನ್ನವಾಯಿತು. ಕೂಡಲೆ ಅವನು ಇಸೋಪನ ಹೇಳಿಕೆಯ ಪ್ರಕಾರ ಅರ್ಧತಾಸಿನ ಅವಕಾಶವನ್ನು ಕೊಟ್ಟನು. ಆ ಬಳಿಕ ಇಸೋಪನು ಒಂದು ದೊಡ್ಡ ಗಿಂಡಿಯ ತುಂಬ ಬಿಸಿ ನೀರು ತಂದು ಅದರಲ್ಲಿ ಒಂದು ಸೆರೆ ಉಪ್ಪು ಚೆಲ್ಲಿ ಆ ನೀರನ್ನು ಗಟಗಟ ಕುಡಿದು ಬಿಟ್ಟನು. ಕೆಲಹೊತ್ತಿನ ಮೇಲೆ ಗಂಟಲದಲ್ಲಿ ಬೊಟ್ಟು ಹಾಕಿ ಕಾರಿಕೊಂಡನು. ಅದರಲ್ಲಿ ಅಂಜೀರಿನ ಸ್ವಲ್ಪ ಅಂಶವಾದರೂ ಇಲ್ಲದ್ದನ್ನು ಕಂಡು ಈತನು ನಿರಪರಾಧಿಯಾಗಿದ್ದಾನೆಂದು ಒಡೆಯನಿಗೆ ಪೂರ್ಣವಾಗಿ ಮನವರಿಕೆಯಾಯಿತು. ಅರ್ಥಾತ್ ಈ ತಪ್ಪು ಆಳುಮಗನದೇ ಇರುವದೆಂದು ನಿಶ್ಚಯವಾಯಿತು. ಆಗ ಒಡೆಯನು ಆಳುಮಗನಿಗೆ—ಇಸೋಪನು ಮಾಡಿದಂತೆ ನೀನೂ ಮಾಡಿ ತೋರಿಸೆಂದು ಆಜ್ಞಾಪಿಸಿದನು. ಆಗ ಉಪಾಯಗಾಣದೆ ಆ ಕಳ್ಳನು ಗಾಬರಿಯಾಗಿ, ಸುಮ್ಮನೆ ತನ್ನ ತಪ್ಪು ಒಪ್ಪಿಕೊಂಡನು. ಇಸೋಪನ ಈ ಸಮಯಸೂಚಕತೆಯನ್ನು ಕಂಡು ಒಡೆಯನಿಗೆ ಬಹಳ ಆಶ್ಚರ್ಯವಾಯಿತು. ಮತ್ತು ಅವನ ವಿಷಯವಾಗಿ ಆದರವು ಉತ್ಪನ್ನವಾಯಿತು. ಇಷ್ಟು ದಿವಸಗಳವರೆಗೆ ಕುರೂಪತೆಯ ಸಲುವಾಗಿ ಅವನು ಕಣ್ಣು ಮುಂದೆ ಬೇಡಾಗಿದ್ದನು; ಈಗ ಇಸೋಪನು ಯಾವಾಗಲೂ ತನ್ನ ಹತ್ತರ ಇರಬೇಕೆಂದು ಅವನಿಗೆ ಅನಿಸಹತ್ತಿತು. ಕೂಡಲೆ ಒಡೆಯನು ಇಸೋಪನನ್ನು ಹೊಲ ಕಾಯುವ ಕೆಲಸದಿಂದ ಬಿಡಿಸಿ, ಯಾವಾಗಲೂ ತನ್ನ ಸಂಗಡ ಇರಬೇಕೆಂದು ಆಜ್ಞಾಪಿಸಿದನು. ಮುಂದೆ ಕಾಲಾಂತರದಿಂದ ಆ ಒಡೆಯನು ಇಸೋಪನನ್ನು ಒಬ್ಬ ಗುಲಾಮರ ವ್ಯಾಪಾರ ಮಾಡುವ ಮನುಷ್ಯನಿಗೆ ಮಾರಬೇಕಾಯಿತು. ಇಸೋಪನು ಸ್ವತಃ ಕುರೂಪಿಯೂ ಅಶಕ್ತನೂ ಆಗಿದ್ದನು. ಮತ್ತು ಆ ವ್ಯಾಪಾರಸ್ಥನು ಬೇರೆ ಬೇರೆ ಸರಕುಗಳನ್ನು ಈ ಗುಲಾಮರ ತಲೆಯ ಮೇಲೆ ಹೊರಿಸಿ ಒಂದು ಊರಿಂದ ಮತ್ತೊಂದು ಊರಿಗೆ ದಿನಾಲು ಪ್ರಯಾಣ ಮಾಡುತ್ತಿದ್ದನು. ಇಸೋಪನನ್ನು ಕೊಂಡದ್ದರಿಂದ ತನಗೇನೂ ಲಾಭವಾಗಲಿಲ್ಲೆಂದು ಆ ವ್ಯಾಪಾರಸ್ಥನ ಮನಸಿಗೆ ಹೊಳೆಯಿತು.

ವ್ಯಾಪಾರಸ್ಥನ ಇತರ ಗುಲಾಮರಂತೆಯೇ ಇಸೋಪನಾದರೂ ಒಂದು ಗಂಟನ್ನು ಹೊರಬೇಕಾಯಿತು. ಬೇರೆ ಗುಲಾಮರು, ಒಳ್ಳೇ ಧೂರ್ತರಾಗಿದ್ದರು; ಅವರು ಇಸೋಪನಿಗೆ ತಿಳಿಯದಂತೆ ಮೊದಲೇ ಹಗುರಾಗಿರುವ ಗಂಟುಗಳನ್ನೆಲ್ಲ ಆರಿಸಿಕೊಂಡು ತೆಗೆದುಕೊಳ್ಳುವ ಆಲೋಚನೆ ಮಾಡಹತ್ತಿದರು; ಆದರೆ ಜಾಣಾಕ್ಷನಾದ ಇಸೋಪನು ಅವರಿಗಿಂತ ಮುಂಚಿತವಾಗಿಯೇ ಎಲ್ಲ ಗಂಟುಗಳಲ್ಲಿ ದೊಡ್ಡದಾದ ಒಂದು ಗಂಟನ್ನು ಎಲ್ಲರ ಭೋಜನ ಸಾಮುಗ್ರಿಗಳ ಗಂಟನ್ನು—ಎತ್ತಿ ತಲೆಯ ಮೇಲೆ ಇಟ್ಟುಕೊಂಡನು. ಅದನ್ನು ಕಂಡು ಉಳಿದ ಗುಲಾಮರು ಅವನಿಗೆ ಚೇಷ್ಟೆ ಮಾಡಿ ನಕ್ಕರು; ಇಸೋಪನು ಒಂದು ಚಕಾರ ಶಬ್ದವನ್ನು ಸಹ ಮಾತಾಡದೆ, ತನ್ನ ಗಂಟು ಹೊತ್ತುಕೊಂಡು ಹಾಗೂ ಹೀಗೂ ಮುಂದೆ ನಡೆದನು. ಅವನ ಗಂಟಿನಲ್ಲಿ ಭೋಜನಸಾಮುಗ್ರಿಗಳಿದ್ದದ

ರಿಂದ ದಿನಾಲು ಅದರೊಳಗಿನ ಕೆಲವು ಭಾಗವು ತೀರುತ್ತಿದ್ದದರಿಂದ ಅದು ದಿನದಿನಕ್ಕೆ ಕಡಿಮೆಕಡಿಮೆಯಾಗುತ್ತ ಕಡೆಯ ದಿವಸ ಅವನ ಗಂಟಿನಲ್ಲಿ ಏನೂ ಉಳಿಯಲಿಲ್ಲ. ಉಳಿದವರ ಗಂಟುಗಳೆಲ್ಲ ಮೊದಲಿದ್ದಷ್ಟೇ ಕಡೆತನಕ ಇದ್ದವು. ಆಗ ಉಳಿದ ಗುಲಾಮರೆಲ್ಲರೂ ಇಸೋಪನ ಧೂರ್ತತನವನ್ನೂ ಸಮಯಸೂಚಕತೆಯನ್ನೂ ಕಂಡು ಬೆರಗಾದರು; ಮತ್ತು ಮುಂದೆ ಆ ಭೋಜನಸಾಮಗ್ರಿಯ ಗಂಟು ನಮಗೆ ತಮಗೆಂದು ತಮ್ಮತಮ್ಮೊಳಗೆ ಬಡದಾಡಹತ್ತಿದರು. ಆದರೆ ಆ ವ್ಯಾಪಾರಸ್ಥನು ಆ ಗಂಟನ್ನು ಯಾವಾಗಲೂ ಇಸೋಪನೇ ತೆಗೆದುಕೊಳ್ಳಬೇಕೆಂದು ನಿಯಮವನ್ನು ಮಾಡಿದನು.

ಮುಂದೆ ಕೆಲವು ಕಾಲದ ಮೇಲೆ ಆ ವ್ಯಾಪಾರಸ್ಥನು ತನ್ನ ಗುಲಾಮರಲ್ಲಿ ಇಬ್ಬರು ಮೂವರನ್ನು ಮಾರಬೇಕಾಯಿತು. ಆಗ ಅವನು ಇಬ್ಬರು ಒಳ್ಳೇ ಧಷ್ಟಪುಷ್ಟರಾದ ಗುಲಾಮರನ್ನೂ ಮೂರನೇಯವನಾದ ಈ ಇಸೋಪನನ್ನೂ ಮಾರಬೇಕೆಂದು ನಿಶ್ಚಯಿಸಿದನು. ಇಸೋಪನು ಅಶಕ್ತನೂ ಕುರೂಪಿಯೂ ಆಗಿದ್ದದರಿಂದ ಅವನನ್ನು ಯಾರೂ ಕೊಳ್ಳಲಿಕ್ಕಿಲ್ಲೆಂದು ಆ ವ್ಯಾಪಾರಸ್ಥನಿಗೆ ಪೂರ್ಣವಾಗಿ ಮನವರಿಕೆಯಾಗಿತ್ತು. ಆದರೆ ಈತನ ನೆರೆಯಲ್ಲಿ ಈ ಉಳಿದ ಇಬ್ಬರನ್ನು ನಿಲ್ಲಿಸಿದರೆ ಈತನಿಂದ ಅವರ ಶಾರೀರಿಕ ದಾರ್ಢ್ಯವು ಒಡೆದು ಕಾಣುವದೆಂದು ಯೋಚಿಸಿ ಅವರಿಬ್ಬರ ನಡುವೆ ಇಸೋಪನನ್ನು ನಿಲ್ಲಿಸಿದನು. ಅಷ್ಟರಲ್ಲಿ ಝಾಂಥಸನೆಂಬ ಹೆಸರಿನ ತತ್ವಜ್ಞಾನಿಯು ಗುಲಾಮರನ್ನು ಕೊಂಡುಕೊಳ್ಳುವದಕ್ಕಾಗಿ ಸಂತೆಗೆ ಬಂದಿದ್ದನು. ಅವನು ಪೇಟೆಯಲ್ಲಿ ಅಡ್ಡಾಡುತ್ತ ಮಾರಾಟಕ್ಕೆ ಬಂದ ಗುಲಾಮರನ್ನು ನೋಡುತ್ತ ಈ ಮೂವರು ಗುಲಾಮರ ಬಳಿಗೆ ಬಂದನು. ಇಸೋಪನಿಗಿಂತ ಉಳಿದ ಇಬ್ಬರು ಗುಲಾಮರು, ಒಳ್ಳೇ ಧಷ್ಟಪುಷ್ಟರಿದ್ದದರಿಂದ ಅವರೊಳಗಿನವನೊಬ್ಬನನ್ನೇ ಕೊಳ್ಳಬೇಕೆಂದು ಆಲೋಚಿಸಿ — ಇವರನ್ನು ಕುರಿತು, ಎಲಾ, ನೀವು, ಏನೇನು ಕೆಲಸ ಮಾಡಬಲ್ಲಿರಿ? ಎಂದು ಕೇಳಿದನು. ಅವರಿಬ್ಬರು— ನಾವು ಎಲ್ಲ ಬಗೆಯ ಕೆಲಸಗಳನ್ನು ಮಾಡಬಲ್ಲೆವು, ಎಂದು ಉತ್ತರವನ್ನು ಕೊಟ್ಟರು. ಆ ಬಳಿಕ ಝಾಂಥಸನು ಕೇವಲ ವಿನೋದದಿಂದ ಇಸೋಪನ ಕಡೆಗೆ ತಿರುಗಿ—ಎಲಾ, ನಿನಗೆ ಯಾವ ಯಾವ ಕೆಲಸಗಳನ್ನು ಮಾಡಲಿಕ್ಕೆ ಬರುವದೋ? ಎಂದು ಕೇಳಿದನು. ಅದಕ್ಕೆ ಇಸೋಪನು ತತ್ಕಾಲಕ್ಕೆ—ಒಡೆಯರೆ, ನನ್ನ ಸಂಗಡಿಗರು ಎಲ್ಲ ಕೆಲಸಗಳನ್ನು ಮಾಡಿ ಬಿಟ್ಟ ಮೇಲೆ ನನ್ನ ಪಾಲಿಗೆ ಯಾವ ಕೆಲಸವು ಉಳಿಯುವದು ? ಆದರೂ ತಾವು ಪ್ರೀತಿಯಿಂದ ನನಗೆ ಒಪ್ಪಿಸಿದ ಕೆಲಸವನ್ನು ನಾನು ಒಳ್ಳೇ ಮನಃಪೂರ್ವಕವಾಗಿ ಮಾಡುವೆನು. ನನ್ನನ್ನು ನೀವು ಕೊಂಡಿರೆಂದರೆ ಮನೆಯಲ್ಲಿ ಹುಡುಗರನ್ನು ಬೆದರಿಸಲಿಕ್ಕೆ ಬೇರೆ ಯಾರನ್ನೂ ಹುಡುಕುವ ಕಾರಣವು ಉಳಿಯಲಿಕ್ಕಿಲ್ಲ. ಈ ಕೆಲಸವನ್ನಂತೂ ನಾನು ಮಾಡಿಯೇ ಮಾಡುವೆನು—ಎಂದು ಉತ್ತರ ಕೊಟ್ಟನು.

ತತ್ವಜ್ಞಾನಿಯಾದ ಝಾಂಥಸನು ಒಳ್ಳೇ ಗುಣಗ್ರಾಹಿಯಾಗಿದ್ದನು. ಇಸೋಪನು ಕೊಟ್ಟ ಉತ್ತರವನ್ನು ಕೇಳಿದ ಕೂಡಲೆ ಅವನು ತನ್ನ ಮನಸಿನಲ್ಲಿ—"ಈ ಗುಲಾಮನು

ಒಳ್ಳೇ ಚತುರನಿದ್ದಂತೆ ತೋರುವದು, ಸಾಧಿಸಿದರೆ ಈತನನ್ನೇ ಕೊಳ್ಳೋಣ. ಈತನು ಕುರೂಪಿಯಾಗಿದ್ದರೇನಾಯಿತು? ಆದರಿಂದ ನಮ್ಮ ಹುಡುಗರಿಗೆ ಒಂದು ಬಗೆಯ ವಿನೋದವೇ ಆಗಬಹುದು." ಈ ಪ್ರಕಾರ ಆಲೋಚಿಸಿ, ಇಸೋಪನನ್ನೇ ಕೊಂಡು ಕೊಂಡನು.

ಮನೆಗೆ ಹೋದ ಕೂಡಲೆ, ಮೊದಲು ಇಸೋಪನಿಗೆ ಹೊರಗೆ ಕೂಡಹೇಳಿ ತಾನು ಒಳಗೆ ಹೋಗಿ, ತನ್ನ ಹೆಂಡರುಮಕ್ಕಳಿಗೂ, ಉಳಿದ ಎಲ್ಲ ದಾಸದಾಸೀ ಜನರಿಗೂ ಕರೆದು,—ಇಂದು ನಾನು ಒಬ್ಬ ಸುಂದರ ಗುಲಾಮನನ್ನು ಕೊಂಡು ತಂದಿದ್ದೇನೆ, ಎಂದು ಹೇಳಿದನು. ಅದರಿಂದ ಅವನನ್ನು ನೋಡಬೇಕೆಂಬ ಲವಲವಿಕೆಯು ಎಲ್ಲರ ಮನಸ್ಸಿನಲ್ಲಿಯೂ ಉತ್ಪನ್ನವಾಯಿತು. ಆ ಅಪೂರ್ವ ಗುಲಾಮನನ್ನು ಯಾವಾಗ ನೋಡೇವೆಂದು ಪ್ರತಿಯೊಬ್ಬರ ಮನಸ್ಸಿನಲ್ಲಿ ಆತುರತೆಯು ಉತ್ಪನ್ನವಾಯಿತು. ಆದರೆ ಇಸೋಪನು ಒಳಗೆ ಬಂದು ಎಲ್ಲರ ದೃಷ್ಟಿಗೆ ಬಿದ್ದ ಕೂಡಲೆ ಆ ಕಾಲಕ್ಕೆ ಅಲ್ಲಿ ಎದ್ದ ಗೊಂದಲವನ್ನು ವರ್ಣಿಸಲಳವಲ್ಲ. ಹುಡುಗರಂತು ಹೆದರಿ ಚೀರುತ್ತ ಅಲ್ಲಿಂದ ಓಡಿಹೋದರು. ದಾಸಿಯು—"ಇದೇನೇ ನಮ್ಮವ್ವಾ ಚಂಡಾಳಿ, ಎಲ್ಲಿ ಕೂತಿತ್ತೋ ಏನೋ, ಇದರ ಮೋರೆಯನ್ನು ನೋಡಿರಿ, ಅಂಜಿಕೆ ಬರುವದು" ಎಂದು ಗಟ್ಟಿಯಾಗಿ ಕಣ್ಣುಮುಚ್ಚಿಕೊಂಡು ಹೊರಟುಹೋದಳು. ಝಾಂಥಸನ ಹೆಂಡತಿಯಂತೂ ಮೊದಲೇ ಒದರಬಡಕ ಸ್ವಭಾವದವಳು; ಈಗ ಅವಳು ಇಸೋಪನನ್ನು ನೋಡಿದ ಕೂಡಲೆ, ಅವನ ಮೇಲೆಯೂ, ತನ್ನ ಗಂಡನ ಮೇಲೆಯೂ ಬಯ್ಗಳ ಮಳೆಯನ್ನು ಸುರಿಸಿದಳು. ಮುಂದೆ ತುಸು ದಿವಸಗಳಲ್ಲಿ ಅವನ ಚಾತುರ್ಯದ ಮಾತುಕಥೆಗಳನ್ನು ಕೇಳಿ, ಝಾಂಥಸನು ಅವನನ್ನು ಬಹಳ ಪ್ರೀತಿಸಹತ್ತಿದನು. ಬರಬರುತ್ತ ಅವನು ಉಳಿದ ಜನರ ಆದರಕ್ಕೂ ಅಲ್ಪಸ್ವಲ್ಪ ಪಾತ್ರನಾದನು.

ಇಸೋಪನು ಝಾಂಥಸನ ಮನೆಯಲ್ಲಿರುವಾಗ ಅವನ ಚಾತುರ್ಯವು ವ್ಯಕ್ತವಾಗುವಂಥ ಕೆಲವು ಸಂಗತಿಗಳು ವರ್ತಿಸಿದವು. ಅವುಗಳಲ್ಲಿ ಕೆಲವುಗಳನ್ನು ಇಲ್ಲಿ ಕೊಡುವೆವು.

ಒಂದು ದಿವಸ ಝಾಂಥಸನು ತನ್ನ ತೋಟದಲ್ಲಿ ತಿರುಗಾಡುತ್ತಿರುವಾಗ ತೋಟಿಗನು ಅವನ ಬಳಿಗೆ ಬಂದು,—ಸ್ವಾಮಿ, ಯಾವ ಗಿಡಗಳನ್ನು ನಾನು ಒಳ್ಳೇ ಲಕ್ಷ್ಯಪೂರ್ವಕವಾಗಿ ಬೆಳಿಸುವೆನೋ ಆ ಗಿಡಗಳು ಅಷ್ಟು ಚನ್ನಾಗಿ ಬೆಳೆಯುವದಿಲ್ಲ. ಆದರೆ ಎಷ್ಟೋ ಗಿಡಗಳಿಗೆ ನಾನು ನೀರು ಸಹ ಹಣಿಸುವದಿಲ್ಲ. ಇನ್ನು ಅವುಗಳ ಜೋಪಾನ ಮಾಡುವದಂತು ಒತ್ತಟ್ಟಿಗಿರಲಿ, ಆ ಗಿಡಗಳು ಒಳ್ಳೇ ಚನ್ನಾಗಿ ಬೆಳೆಯುತ್ತವೆ. ಇದಕ್ಕೆ ಕಾರಣವೇನಿರಬಹುದು? ಎಂದು ಕೇಳಿದನು. ಝಾಂಥಸನಿಗೆ ಆದರ ಸಮರ್ಪಕ ಉತ್ತರವು ಸೂಚಿಸಲಿಲ್ಲಾದ ಕಾರಣ ಅವನು ಇಸೋಪನ ಸಮಯಸೂಚಕತೆಯನ್ನು ಪರೀಕ್ಷಿಸ

ಬೇಕೆಂದು ಅವನಿಗೆ ಅದೇ ಪ್ರಶ್ನವನ್ನು ಮಾಡಿದನು. ಅದಕ್ಕೆ ಇಸೋಪನು ತತ್ಕಾಲಕ್ಕೆ—ಒಡೆಯರೆ, ಭೂಮಿಯಾದರೂ ಒಬ್ಬ ಸ್ತ್ರೀಯಳೇ ಇರುತ್ತಾಳೆ. ಅವಳು ತನ್ನ ಸ್ವಂತ ಮಕ್ಕಳ ಸಂಗೋಪನವನ್ನು ಒಳ್ಳೇ ಮನಃಪೂರ್ವಕವಾಗಿ ಮಾಡುವಳು, ಆದರೆ ಪರರ ಮಕ್ಕಳನ್ನು ಸಂರಕ್ಷಿಸುವ ಕೆಲಸವನ್ನು ಅವಳಿಗೆ ಒಪ್ಪಿಸಿದರೆ ಅವಳು ಅವರನ್ನು ಸವತಿಯ ಮಕ್ಕಳಂತೆ ನೋಡುವಳೆಂಬದರಲ್ಲಿ ಆಶ್ಚರ್ಯವೇನು ? ಸ್ವಭಾವಿಕವಾಗಿ ಇಲ್ಲದ ಪ್ರೇಮವು ಅವಳಿಗಾದರೂ ಎಲ್ಲಿಂದ ಬರಬೇಕು ?

ಒಮ್ಮೆ ಝಾಂಥಸನಿಗೂ ಅವನ ಹೆಂಡತಿಗೂ ಯಾವದೋ ಒಂದು ಕಾರಣದಿಂದ ಜಗಳವಾಯಿತು; ಅದರಿಂದ ಝಾಂಥಸನ ಹೆಂಡತಿಯು ಎಷ್ಟೋ ದಿವಸಗಳವರೆಗೆ ತನ್ನ ಗಂಡನ ಕೂಡ ಮಾತು ಬಿಟ್ಟಿದ್ದಳು; ಆಗ ಝಾಂಥಸನ ಮನಸ್ಸಿಗೆ ಬಹಳ ವಿಷಾದವಾಯಿತು. ಆದರೆ ಹೆಂಡತಿಯ ಮನಸ್ಸು ಪುನಃ ಮೊದಲಿನಂತೆ ಸರಳವಾಗಲಿಕ್ಕೆ ಏನು ಮಾಡಬೇಕೆಂದು ಅವನಿಗೆ ತಿಳಿಯಲಿಲ್ಲ. ಕಡೆಗೆ ಅವನು ಇಸೋಪನನ್ನು ಕರೆದು ನಡೆದ ವೃತ್ತಾಂತವನ್ನು ಅವನಿಗೆ ಹೇಳಿ ಇದಕ್ಕೇನಾದರೂ ಹಂಚಿಕೆಯನ್ನು ತೆಗೆಯೆಂದು ಹೇಳಿದನು. ಅದಕ್ಕೆ ಇಸೋಪನು– "ಒಡೆಯರೆ, ಅದಕ್ಕೇಕೆ ಇಷ್ಟು ಚಿಂತೆ ಮಾಡುವಿರಿ ? ನೀವು ಊಟಕ್ಕೆ ಕುಳಿತಾಗ ನನ್ನನ್ನು ಕರೆದು–'ಇಸೋಪಾ, ನಿಜವಾಗಿ ನನ್ನ ಹಿತ ಬಯಸುವಂಥ ಅತ್ಯಂತ ಪ್ರಾಮಾಣಿಕ ಮಿತ್ರರನ್ನು ಕರಕೊಂಡು ಬಾ,' ಎಂದು ನನಗೆ ಹೇಳಿರಿ. ಆ ಬಳಿಕ ನಾನು ಏನು ಮಾಡುವೆನೋ ನೋಡಿರಿ. ಇದರಿಂದ ಇಷ್ಟಕಾರ್ಯವು ಸಹಜವಾಗಿ ಸಿದ್ಧವಾಗುವದು" ಎಂದು ಹೇಳಿದನು. ಮರುದಿವಸ ಝಾಂಥಸನು ಊಟಕ್ಕೆ ಕುಳಿತಾಗ ಮೊದಲು ಗೊತ್ತಾದ ಮೇರೆಗೆ ಇಸೋಪನನ್ನು ಕರೆದು ಆ ಮಾತನ್ನು ಹೇಳಿದನು. ಕೂಡಲೆ ಇಸೋಪನು ಒಬ್ಬ ಕುರುಬನು ಕುರಿಗಳನ್ನು ಕಾಯುವದಕ್ಕೆ ಸಾಕಿದ ಒಂದು ನಾಯಿಯನ್ನು ತಂದು ಝಾಂಥಸನ ಮುಂದೆ ನಿಲ್ಲಿಸಿದನು. ಅದನ್ನು ಕಂಡು ಝಾಂಥಸನ ಹೆಂಡತಿಯು, ಒಳ್ಳೇ ಸಂತಾಪಗೊಂಡು,—ದುಷ್ಟಾ, ನೀಚಾ, ಚಾಂಡಾಲಾ ಇವರ ನಿಜವಾದ ಹಿತವನ್ನು ಬಯಸುವಂಥ ಪ್ರಾಮಾಣಿಕ ಮಿತ್ರರೆಂದರೆ ಈ ನಾಯಿಯೆ ? ನಾನು ಇವರ ಹಿತಚಿಂತಕಳಲ್ಲವೆ ?—ಎಂದು ಒದರುತ್ತ ಬಂದಳು. ಇಸೋಪನು ಶಾಂತ ಮನಸಿನಿಂದ— ಸೈ, ಸೈ, ಅವ್ವನವರೆ, ನಿಜವಾದ ಹಿತಚಿಂತಕರಿದ್ದರೆ ಇಂಥವರೇ ಇರಬೇಕು. ನೋಡಿರಿ, ನಿಜವಾಗಿ ಗಂಡನ ಹಿತ ಬಯಸುವವರು ಸಮ್ಮಸುಮ್ಮನೆ ಅಷ್ಟಿಷ್ಟು ಮಾತಿಗೆ ಸಿಟ್ಟಾಗಿ ಎಂಟೆಂಟು ದಿವಸಗಳ ವರೆಗೆ ಮಾತು ಬಿಟ್ಟು ಕೂಡ್ರುವರೆ ?—ಎಂದು ಉತ್ತರ ಕೊಟ್ಟನು. ಆದರಿಂದ ಝಾಂಥಸನ ಹೆಂಡತಿಯ ತಪ್ಪು ಅವಳಿಗೆ ಮನಸಿನಲ್ಲಿ ಹೊಳೆಯಿತು. ಅಂದಿನಿಂದ ಮುಂದೆ ಎಂದೂ ಅವಳು ಗಂಡನ ಮೇಲೆ ಸಿಟ್ಟಾಗಲಿಲ್ಲ; ಹಾಗು ಮಾತು ಬಿಡಲಿಲ್ಲ.

ಒಂದಾನೊಂದು ದಿವಸ ಝಾಂಥಸನು ತನ್ನ ಕೆಲವು ಸ್ನೇಹಿತರನ್ನು ಊಟಕ್ಕೆ ಕರೆದು ಊಟಕ್ಕೆ ಅತ್ಯುತ್ಕೃಷ್ಟವಾದ ಜಿನಸುಗಳನ್ನು ಸಿದ್ಧಮಾಡೆಂದು ಇಸೋಪನಿಗೆ

ಆಜ್ಞಾಪಿಸಿದನು. ಊಟಕ್ಕೆ ಬರತಕ್ಕವರೆಲ್ಲರೂ ಬಂದು ಕುಳಿತುಕೊಂಡರು. ಯಾವತ್ತು ಪದಾರ್ಥಗಳು ಬಡಿಸಲ್ಪಟ್ಟವು; ಎಲ್ಲ ಪದಾರ್ಥಗಳು ನಾಲಿಗೆಯವೇ ಮಾಡಲ್ಪಟ್ಟಿದ್ದವು. ಝಾಂಥಸನು ಇಸೋಪನಿಗೆ ಹೀಗೇಕೆಂದು ಪ್ರಶ್ನೆ ಮಾಡಿದನು. ಅದಕ್ಕೆ ಇಸೋಪನು—ಒಡೆಯರೆ, ನಾಲಿಗೆಯಷ್ಟು ಅತ್ಯುತ್ತಮವಾದ ವಸ್ತುವು ಬೇರೊಂದಿಲ್ಲ. ಈ ನಾಲಿಗೆಯು ತನ್ನಲ್ಲಿರುವ ಮಾಧುರ್ಯದಿಂದ ಎಷ್ಟು ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡಿರುವದೋ ಅವುಗಳನ್ನು ಮಾಡಲಿಕ್ಕೆ ಮತ್ತೆ ಯಾರು ಸಮರ್ಥರಾಗುವರು ? ಈ ಜಗತ್ತಿನೊಳಗಿನ ಒಳ್ಳೇ ಕೆಡಕು, ಇಷ್ಟಾನಿಷ್ಟ ವಸ್ತುಗಳನ್ನು ವಿಂಗಡಿಸಲಿಕ್ಕಾದರೂ ನಾಲಿಗೆಯೇ ಬೇಕಾಗುವದು. ಸತ್ಕಾರ್ಯಗಳನ್ನು ಮಾಡಲಿಕ್ಕೆ ಪ್ರಯತ್ನಿಸುವಂತಹದು, ಪರಮೇಶ್ವರನ ಹಾಗು ಸಜ್ಜನರ ಗುಣಗಳನ್ನು ವರ್ಣಿಸುವಂತಹದೂ ನಾಲಿಗೆಯೇ. ಸಾರಾಂಶ ಜಗತ್ತಿನಲ್ಲಿ ಅತ್ಯುತ್ಕೃಷ್ಟವಾದ ವಸ್ತುವೆಂದರೆ ನಾಲಿಗೆಯು. ಉತ್ಕೃಷ್ಟ ವಸ್ತುವಿನ ಊಟವನ್ನು ಸಿದ್ಧಮಾಡಬೇಕೆಂದು ತಮ್ಮ ಅಪ್ಪಣೆಯಾಗಿತ್ತು. ಆ ಪ್ರಕಾರ ಸಿದ್ಧಮಾಡಿದ್ದೇನೆ—ಎಂದು ಹೇಳಿದನು. ಇಸೋಪನ ಸಮಯೋಚಿತವಾದ ಮಾತುಗಳನ್ನು ಕೇಳಿ ಎಲ್ಲರೂ ಕೌತುಕಬಟ್ಟರು.

ಮರುದಿವಸ ಝಾಂಥಸನು ಪುನಃ ಇಸೋಪನನ್ನೇ ಕರೆದು, ಇಸೋಪಾ, ಈಹೊತ್ತು ಜಗತ್ತಿನಲ್ಲಿ ಅತ್ಯಂತ ಕೀಳು ತರದ ಒಡವೆಯಿಂದ ಊಟದ ಪದಾರ್ಥಗಳನ್ನು ಸಿದ್ಧಮಾಡೆಂದು ಹೇಳಿದನು. ಇಸೋಪನು ಪುನಃ ಎಲ್ಲ ಪದಾರ್ಥಗಳನ್ನು ನಾಲಿಗೆಯಿಂದಲೇ ಮಾಡಿದನು. ಒಡೆಯನು ನೋಡಿ—"ಎಲಾ ಇದೇನು ? ಪುನಃ ನಿನ್ನಿನಂತೆಯೇ ಮಾಡಿರುವೆಯಲ್ಲ ! ಹೀಗೇಕೆ ಮಾಡಿದೆ ?" ಎಂದು ಪ್ರಶ್ನೆ ಮಾಡಲು, ಇಸೋಪನು— ಒಡೆಯರೆ ? ಎಲ್ಲ ಒಡವೆಗಳಲ್ಲಿ ನಾಲಿಗೆಯು ಅತ್ಯಂತ ಕೀಳತರದ್ದು; ಜಗತ್ತಿನೊಳಗಿನ ಜಗಳ, ಬಡದಾಟ, ಕೊಲೆ ಮುಂತಾದವುಗಳಿಗೆಲ್ಲ ಈ ನಾಲಿಗೆಯು ಮೂಲ ಕಾರಣವಾಗಿರುತ್ತದೆ. ಇದು ಬೇರೆ ಬೇರೆ ಕಡೆಗೆ ಹಚ್ಚಿದಷ್ಟು ಕೊಳ್ಳಿಯನ್ನು ಬೇರೆ ಯಾರೂ ಹಚ್ಚಿರಲಿಕ್ಕಿಲ್ಲ. ಆದ ಕಾರಣ ಈ ನಾಲಗೆಯು ಶ್ರೇಷ್ಠವಾಗಿದ್ದಷ್ಟೇ ಕನಿಷ್ಠವೂ ಆಗಿರುವದು; ಉತ್ತಮವಾಗಿದ್ದಷ್ಟೇ ಅಧಮವೂ ಆಗಿರುವದು," ಎಂದು ಉತ್ತರವನ್ನು ಕೊಟ್ಟನು.

ಮತ್ತೊಮ್ಮೆ, ಝಾಂಥಸನು, ಒಂದು ಮೇಜವಾನಿಯ ಸಮಾರಂಭಕ್ಕೆ ಹೋಗಿದ್ದನು; ಅಲ್ಲಿ ಅವನು ತಕ್ಕಷ್ಟಕ್ಕಿಂತ ಹೆಚ್ಚು ಮದ್ಯಪ್ರಾಶನ ಮಾಡಿ ಸ್ಮೃತಿ ತಪ್ಪಿದಾಗ "ನಾನು ಸಮುದ್ರವನ್ನೆಲ್ಲ ಕುಡಿದು ಬಿಡುತ್ತೇನೆ; ಇಲ್ಲದಿದ್ದರೆ ಪ್ರತಿಪಕ್ಷದವರಿಗೆ ನನ್ನ ಮನೆಮಾರುಗಳ ಮೇಲಿನ ಹಕ್ಕು ಬಿಟ್ಟುಕೊಡುತ್ತೇನೆ" ಎಂದು ಆಡಿ ಜಿದ್ದು ಕಟ್ಟಿದನು. ನೆರೆದ ಜನರೆಲ್ಲರು, "ಇದೇನು ಈತನು ಹೀಗೇಕೆ ಮಾತಾಡುತ್ತಾನೆ" ಎಂದನ್ನಹತ್ತಿದರು. ಆದರೂ ಅವನು ಹೆಚ್ಚು ಹೆಚ್ಚು ಒದರಿ, ಸಮುದ್ರವನ್ನು ಕುಡಿಯುವ ಆತ್ಮಪೌರುಷದ

ಮಾತುಗಳನ್ನು ಕೊಚ್ಚಹತ್ತಿದನು. ಎಷ್ಟು ಮಾತಾಡಿದರೂ ನೆರೆದವರಲ್ಲಿ ಒಬ್ಬರೂ
ಎದ್ದುನಿಂತು ಪ್ರತಿಪಕ್ಷಿಗಳಾಗಲಿಕ್ಕೆ ಒಪ್ಪಲೊಲ್ಲರು; ಇದನ್ನು ಕಂಡು ಅವನು ಇವರು
ಹೇಡಿಗಳು, ಅಂಜುಬುರಕರು ಎಂದು ಅವರನ್ನು ಒಳ್ಳೇ ಜರಿದು ಮಾತಾಡಹತ್ತಿದನು.
ಆಗ ಒಬ್ಬ ಗೃಹಸ್ಥನು ಎದ್ದುನಿಂತು, ಅವನಂತೆ ತಾನೂ ಜಿದ್ದುಕಟ್ಟಿ "ನೀನು
ಸಮುದ್ರವನ್ನು ಕುಡಿದರೆ ನಾನು ನನ್ನ ಮನೆಮಾರುಗಳನ್ನು ನಿನಗೆ ಕೊಡುತ್ತೇನೆ; ನೀನು
ಆಡಿದಂತೆ ಮಾಡದಿದ್ದರೆ ನಿನ್ನ ಮನೆಮಾರುಗಳನ್ನು ನನಗೆ ಕೊಡಲಿಕ್ಕೆ ಬೇಕು" ಎಂದು
ಹೇಳಿದನು. ಈ ಮಾತಿಗೆ ಉಭಯತರು ಒಪ್ಪಿಕೊಂಡ ಬಳಿಕ ಜಿದ್ದು ಕಟ್ಟಿದ
ಮಾತಿನ ಪ್ರತೀತಿಯನ್ನು ಮರುದಿವಸ ನೋಡಬೇಕೆಂದು ಗೊತ್ತಾಯಿತು. ರಾತ್ರಿ
ಬೆಳತನಕ ಝಾಂಥಸ ಸಾಹೇಬರು ನಿದ್ದೆಮಾಡಿ ಏಳಲು ತಲೆಯೊಳಗಿನ ಮದ್ಯಪ್ರಾಶನದ
ಗುಂಗು ಇಳಿದದ್ದರಿಂದ ಮುನ್ನಾ ದಿವಸ ಮಾಡಿದ ಪಣದ ವಿಷಯವಾಗಿ ಅವನಿಗೆ ಬಹಳ
ಪಶ್ಚಾತ್ತಾಪವಾಯಿತು. ಆದರೆ ಮಾಡತಕ್ಕದ್ದೇನು? ಈ ಜಿದ್ದಿನೊಳಗಿಂದ ಹೇಗೆ ಪಾರಾಗ
ಬೇಕೆಂದು ಚಿಂತಾಕ್ರಾಂತನಾಗಿ ಆಲೋಚನೆ ಮಾಡಹತ್ತಿದನು. ಝಾಂಥಸನ ಹೆಂಡ
ತಿಯೂ ಗಾಬರಿಯಾಗಿ ಸಂತಾಪದಿಂದ ತನ್ನ ದೈವವನ್ನು ಹಳಿದುಕೊಳ್ಳಹತ್ತಿದಳು. ಆದರೆ
ಇಸೋಪನು—"ಒಡೆಯರೆ, ಯಾಕೆ ಚಿಂತೆ ಮಾಡುತ್ತೀರಿ? ಧೈರ್ಯ ತಾಳಿರಿ, ನಾನು
ಇದಕ್ಕೆ ತಕ್ಕ ಹಂಚಿಕೆಯನ್ನು ಮಾಡುತ್ತೇನೆ," ಎಂದು ಆಶ್ವಾಸನವನ್ನು ಕೊಟ್ಟನು.
ಗೊತ್ತುಮಾಡಿದ ವೇಳೆಗೆ ನಿಯಮಿಸಿದ ಸ್ಥಳದಲ್ಲಿ ಜನರೆಲ್ಲರೂ ನೆರೆದರು. ಅಲ್ಲಿಗೆ ಝಾಂಥ
ಸನೂ ಇಸೋಪನೂ ಕೂಡಿಹೋದರು. ಈ ಸಂಗತಿಯನ್ನು ನೋಡಬೇಕೆಂದು ಅಲ್ಲಿ
ಬಹು ಜನರು ನೆರೆದಿದ್ದರು. ಯಾರೊಬ್ಬರು ಝಾಂಥಸನ ಮೂರ್ಖತನಕ್ಕಾಗಿ ಅವನನ್ನು
ಹಳಿಯುತ್ತಿದ್ದರು. ಇಂಥ ತಿಳಿಗೇಡಿತನದ ಜಿದ್ದುಕಟ್ಟಿದ ಝಾಂಥಸನು ಇನ್ನು ಸಭೆಗೇ
ಬರಲಿಕ್ಕಿಲ್ಲೆಂದು ಎಲ್ಲರೂ ಅನುಮಾನ ಮಾಡಿದರು. ಆದರೂ ಅವನು ಬಂದಕೂಡಲೆ ಈಗ
ಮಾತ್ರ ಈತನ ಮೂರ್ಖತನದ ಪರಮಾವಧಿಯಾಯಿತು; ಸಮುದ್ರವೆಂದರೆ ಈ ಗೃಹ
ಸ್ಥನು ಏನೆಂದು ತಿಳಿದಿರುವನೋ ಏನೋ ಎಂದು ಚೇಷ್ಟೆಮಾಡಿ ನಗಹತ್ತಿದರು. ನಿಯ
ಮಿತ ಹೊತ್ತಾದ ಕೂಡಲೆ, ಇಸೋಪನು ಮುಂದೆಬಂದು, ತನ್ನ ಒಡೆಯನ ಪರ್ತಿಯಿಂದ,
"ಸಭ್ಯಗೃಹಸ್ಥರೆ, ನಿನ್ನಿನ ದಿವಸ ಗೊತ್ತಾದ ಮೇರೆಗೆ ನನ್ನ ಒಡೆಯನು, ಸಮುದ್ರವನ್ನು
ಕುಡಿಯುವ ಸಿದ್ಧತೆಯಿಂದ ಇಲ್ಲಿಗೆ ಬಂದಿರುವನು. ಆದರೆ ಮೊದಲು, ಅದಕ್ಕೆ ಕೂಡುವ
ನದಿಗಳನ್ನೆಲ್ಲ ಪ್ರತಿಪಕ್ಷದವರು ಈಗಿಂದೀಗಲೇ ನಿಲ್ಲಿಸಿಬಿಡತಕ್ಕದ್ದು. ಸಮುದ್ರವನ್ನಷ್ಟೇ
ಕುಡಿಯಬೇಕೆಂದು ಮಾತಾಗಿರುವದು. ನದಿಗಳ ಬಗ್ಗೆ ಮಾತಾಗಿಲ್ಲ. ಆದಕಾರಣ ಕುಡಿ
ಯುವ ಸಮಯದಲ್ಲಿ ಸಮುದ್ರದ ನೀರನ್ನಷ್ಟೇ ಅವರ ಮುಂದೆ ಇಡುವದು ಪ್ರತಿಪಕ್ಷ
ದವರ ಕರ್ತವ್ಯವಾಗಿರುತ್ತದೆ. ಆಗ ಅದರಲ್ಲಿ ನದಿಗಳ ನೀರು ಬೆರೆಯದಂತೆ ಬೇಗನೆ
ವ್ಯವಸ್ಥೆ ಮಾಡತಕ್ಕದ್ದು. ಇಲ್ಲದಿದ್ದರೆ ಸೋತೆವೆಂದು ಹೇಳಿ ತಮ್ಮ ಮನೆಮಾರುಗಳನ್ನು
ನನ್ನ ಒಡೆಯನಿಗೆ ಒಪ್ಪಿಸಿ ಹೊರಟುಹೋಗಬೇಕು" ಎಂದು ಹೇಳಿದನು.

ಇಸೋಪನ ಈ ಚಾತುರ್ಯದ ಮಾತನ್ನು ಕೇಳಿ ಜನರು—ಝಾಂಥಸನು ಯುಕ್ತಿಯಿಂದ ಜಾರಿಕೊಂಡನೆಂದು ತಮ್ಮತಮ್ಮೊಳಗೆ ಮಾತಾಡುತ್ತ ಇಸೋಪನ ಚಾತುರ್ಯವನ್ನು ಹೊಗಳುತ್ತಾ ಅಲ್ಲಿಂದ ಹೊರಟುಹೋದರು.

ಒಮ್ಮೆ ಝಾಂಥಸನ ಊರವರದೊಂದು ಸಭೆಯು ನೆರೆದಿತ್ತು. ಆಗ ಒಂದು ಗರುಡ ಪಕ್ಷಿಯು ಒಬ್ಬ ಗುಲಾಮನ ಕಾಲೊಳಗಿನ ಕಡಗವನ್ನು ಬಾಯಲ್ಲಿ ಹಿಡಕೊಂಡು ಬಂದು ಸಭೆಯ ಮಧ್ಯದಲ್ಲಿ ಒಗೆಯಿತು. ಅದನ್ನು ಕಂಡು ಎಲ್ಲರೂ ಇದೇನು ದುಶ್ಚಿಹ್ನವೆಂದು ಅನ್ನಹತ್ತಿದರು. ಆ ಊರಲ್ಲಿ ಝಾಂಥಸನೇ ಬುದ್ಧಿವಂತನು. ಪ್ರಮುಖರಾದ ಜನರು ಅವನ ಬಳಿಗೆ ಬಂದು ಇದರ ಅರ್ಥವನ್ನು ಹೇಳಬೇಕೆಂದು ಅವನಿಗೆ ವಿಜ್ಞಾಪನೆಯನ್ನು ಮಾಡಿಕೊಂಡರು. ಅವನು ನಿಮ್ಮ ಪ್ರಶ್ನದ ಉತ್ತರವನ್ನು ನಾಳೆಗೆ ಹೇಳುತ್ತೇನೆಂದು ಹೇಳಿ, ಆ ದಿವಸ ರಾತ್ರಿ ಇದೇ ಪ್ರಶ್ನವನ್ನು ಇಸೋಪನಿಗೆ ಕೇಳಿದನು. ಕೂಡಲೆ ಇಸೋಪನು—ಒಡೆಯರೆ, ನನ್ನನ್ನು ನೀವು ಗುಲಾಮಗಿರಿಯೊಳಗಿಂದ ಮುಕ್ತನನ್ನಾಗಿ ಮಾಡಿದರೆ, ನಾನು ಈ ಪ್ರಶ್ನದ ಉತ್ತರವನ್ನು ಹೇಳುತ್ತೇನೆ—ಎಂದು ವಿನಯದಿಂದ ಹೇಳಿಕೊಂಡನು. ಇಸೋಪನ ಬುದ್ಧಿವಂತಿಕೆ, ಚಾತುರ್ಯಗಳಿಗೆ ಮೆಚ್ಚಿ, ಝಾಂಥಸನು ಅವನ ಮಾತಿಗೆ ಒಪ್ಪಿಕೊಂಡು ಅವನಿಗೆ ಸ್ವಾತಂತ್ರ್ಯವನ್ನು ಕೊಟ್ಟನು. ಆ ಬಳಿಕ ಇಸೋಪನು—"ಯಾವನೋ ಒಬ್ಬ ಅರಸನು ಈ ಊರವರನ್ನು ಗುಲಾಮರನ್ನಾಗಿ ಮಾಡಲಿಕ್ಕೆ ಹವಣಿಸುತ್ತಾನೆ. ಗರುಡ ಪಕ್ಷಿಯು ಸೂಚಿಸಿದ ಅರ್ಥವು ಇದೇ ಆಗಿರುವದು. ಇದನ್ನು ಎಲ್ಲ ಜನರು ಮುಂದಾಗಿಯೇ ತಿಳಿದು, ಸಿದ್ಧತೆಯಲ್ಲಿರತಕ್ಕದ್ದು" ಎಂದು ಹೇಳಿದನು. ಇಲ್ಲಿಂದ ಮುಂದೆ ಇಸೋಪನು ಸಾರ್ವಜನಿಕ ಕೆಲಸಗಳಲ್ಲಿ ಮನಸು ಹಾಕಿ ಜನರಿಗೆ ಉಪದೇಶ ಮಾಡುತ್ತ ತಿರುಗಾಡಹತ್ತಿದನು. ಅದರಿಂದ ಅವನು ಬಹಳ ಹೆಸರಾದನು. ಜನರು ಅವನನ್ನು ಒಳ್ಳೇ ಪೂಜ್ಯ ಬುದ್ಧಿಯಿಂದ ನೋಡಹತ್ತಿದರು.

ಮುಂದೆ ತುಸು ದಿವಸಗಳಲ್ಲಿಯೇ, ಲೀಡಿಯಾ ದೇಶದ ಅರಸನಾದ ಕ್ರೀಸಸನೆಂಬವನು ಝಾಂಥಸನ ಊರ ಜನರಿಗೆ ಹೇಳಿಕಳಿಸಿದ್ದೇನಂದರೆ:—"ನೀವು ನನಗೆ ಇಂತಿಷ್ಟು ಹಣವನ್ನು ಕಾಣಿಕೆಯಾಗಿ ಕೊಡತಕ್ಕದ್ದು, ಅದನ್ನು ಸುಮ್ಮನೆ ಕೊಡದಿದ್ದರೆ ನಿಮ್ಮ ಮೇಲೆ ಸ್ವಾರೀ ಮಾಡಿ, ನಿಮ್ಮ ಊರೊಳಗೆ ಕೊಲೆಸುಲಿಗೆಗಳನ್ನು ಮಾಡಿ, ನಿಮ್ಮನ್ನೆಲ್ಲ ಹಾಳು ಮಾಡುತ್ತೇನೆ." ಈ ಸುದ್ದಿಯನ್ನು ಕೇಳಿ ಊರ ಜನರೆಲ್ಲರೂ ಗಾಬರಿಯಾದರು; ಮುಂದೆ ಏನು ಮಾಡಬೇಕೆಂಬ ವಿಚಾರವು ಯಾರಿಗೂ ಬಗೆಹರಿಯದಂತಾಯಿತು. ಆಗ ಊರವರೆಲ್ಲರೂ ಕೂಡಿ ಸಭೆಯನ್ನು ನೆರೆಯಿಸಿದರು. ಈ ಸಭೆಯಲ್ಲಿ ಈಗ ಇಸೋಪನೂ ಇದ್ದನು. ಯಾಕಂದರೆ ಅವನು ಈಗ ಮುಂಚಿನಂತೆ ಗುಲಾಮನಾಗಿದ್ದಿಲ್ಲ. ಇತರರಂತೆ ಅವನಿಗೂ ನಾಗರಿಕತನದ ಹಕ್ಕುಗಳು ಇದ್ದವು. ಅವನು ಆ ಕಾಲಕ್ಕೆ ಎದ್ದು ನಿಂತು ನೆರೆದ ಜನರಿಗೆ—"ಎಲೈ ಲೋಕಾಗ್ರಣಿಗಳೆ, ಕಪ್ಪ ಕೊಟ್ಟು ಮಾನಹಾನಿಯನ್ನು

ಮಾಡಿಕೊಳ್ಳಬೇಡಿರಿ. ಇಂದು ನಿಮಗೆ ಹೀಗೆ ಮಾಡುವದು ಹಿತಕರವಾಗಿ ತೋರ ಬಹುದು. ಆದರೆ ಒಮ್ಮೆ ನಾವು ಹಿಂಜರಿದೆವೆಂದು ಶತ್ರುಗಳಿಗೆ ತಿಳಿದರೆ ಕ್ರೀಸಸನು ನಮ್ಮನ್ನು ಕ್ಷಣಕ್ಷಣಕ್ಕೆ ಹತ್ತಿಕ್ಕಲು ಯತ್ನ ಮಾಡುವನು. ಅವರ ಕೂಡ ಯುದ್ಧಕ್ಕೆ ನಿಲ್ಲುವ ಮಾರ್ಗವು ಈಗ ಕಠಿಣವಾಗಿ ತೋರಿದರೂ ಅದರಿಂದಲೇ ನಮಗೆ ಮುಂದೆ ಹಿತ ವಾಗುವದು. ಶಕ್ಯವಿದ್ದಷ್ಟು ಮಟ್ಟಿಗೆ ನಾವು ನಮ್ಮ ಸ್ವಾತಂತ್ರ್ಯವನ್ನು ಕಾಯ್ದು ಕೊಳ್ಳಲಿಕ್ಕೆಬೇಕು"—ಎಂದು ಬೋಧಿಸಿದನು.

ಈ ಸಭೆಯಲ್ಲಿ ಕ್ರೀಸಸನ ವಕೀಲನು ಇದ್ದೇ ಇದ್ದನು. ಅವನು ಇಲ್ಲಿ ನಡೆದ ಸಂಗತಿಗಳನ್ನೆಲ್ಲ ತನ್ನ ಅರಸನಿಗೆ ಹೇಳಿದನು. ಮತ್ತು-"ಆ ಊರಲ್ಲಿ ಇಸೋಪನು ಇರುವ ವರೆಗೆ, ಅದು ನಮ್ಮ ಕೈಸೇರುವದು ಅಶಕ್ಯವು" ಎಂದು ಹೇಳಿದನು. ಕ್ರೀಸಸನಿಗೆ ಈ ಮಾತು ಸರಿದೋರಿದ್ದರಿಂದ ಅವನು ಆ ಊರವರಿಗೆ,"ನಿಮ್ಮ ಊರಲ್ಲಿ ಇರುವ ಇಸೋಪ ನೆಂಬ ಗೃಹಸ್ಥನನ್ನು ನಮ್ಮ ಕಡೆಗೆ ಕಳಿಸಿಕೊಡಿರಿ. ಅಂದರೆ ನಾನು ನಿಮಗೆ ಯಾವ ಬಗೆಯ ತೊಂದರೆಯನ್ನು ಕೊಡುವದಿಲ್ಲ" ಎಂದು ಹೇಳಿಕಳಿಸಿದನು.

ಇಡೀ ಊರ ಮೇಲೆ ಹಾಯ್ದು ಪಿಡಗು ಕೇವಲ ಇಸೋಪನೊಬ್ಬನ ಮೇಲೆಯೇ ಬಗೆಹರಿಯುವದೆಂದು ಜನರು ತಮ್ಮೊಳಗೇ ಆಲೋಚಿಸಿ ಅವನನ್ನು ಕಳಿಸಿಕೊಡಬೇಕೆಂದು ಯೋಚನೆ ಮಾಡಹತ್ತಿದರು. ಆ ಸುದ್ದಿಯು ಇಸೋಪನಿಗೆ ತಿಳಿಯಲು ಅವನು— ನನ್ನನ್ನು ನೀವು ಶತ್ರುಗಳ ಕೈಯಲ್ಲಿ ಕೊಟ್ಟರೆ ಮುಂದೆ ನಿಮಗೆ ಅನೇಕ ತೊಂದರೆಗಳು ಸಂಭವಿಸಬಹುದೆಂದು ಅವರಿಗೆ ಎಚ್ಚರಿಕೆಯನ್ನು ಕೊಡುವದಕ್ಕಾಗಿ ಒಂದು ಕಥೆ ಹೇಳಿ ದನು. ಆ ಕಥೆಯು ಯಾವದೆಂದರೆ :

"ಒಮ್ಮೆ ಒಂದು ನರಿಯು ಒಂದು ಕುರಿಯ ಹಿಂಡಿನೊಳಗಿನ ಕೆಲವು ಕುರಿಗಳನ್ನು ಅಪಹರಿಸಬೇಕೆಂದು ಹೊಂಚುಹಾಕಿತ್ತು. ಎಷ್ಟು ದಿವಸಗಳವರೆಗೆ ಪ್ರಯತ್ನಮಾಡಿದರೂ ನಾಯಿಗಳ ಬಲವಾದ ಕಾವಲು ಇದ್ದದರಿಂದ ಒಂದು ಕುರಿಯಾದರೂ ಅದಕ್ಕೆ ದೊರಕ ಲಿಲ್ಲ. ಈ ನಾಯಿಗಳು ಇರುವವರೆಗೆ ನನ್ನ ಕಾರ್ಯವು ಸಾಧಿಸುವದಿಲ್ಲೆಂದು ತಿಳಿದು ನರಿಯು ಕುರಿಗಳ ಕೂಡ ಒಡಂಬಡಿಕೆಯ ಸಂಧಾನವನ್ನು ಹಚ್ಚಿತು; ಒಪ್ಪಂದದ ಕರಾರು ಗಳಲ್ಲಿ ನಾಯಿಗಳನ್ನು ತನ್ನ ಕಡೆಗೆ ಕಳಿಸಿಕೊಡಬೇಕೆಂಬದೊಂದು ಕರಾರು ಹಾಕಿತು. ಅದಕ್ಕೆ ನಮ್ಮ ಜೀವವು ಉಳಿದರೆ, ಸಾಕೆಂದು ಭಾವಿಸಿ ಕುರಿಗಳೆಲ್ಲ ಕೂಡಿ ಆಲೋಚಿಸಿ ನರಿಯ ಕರಾರುಗಳಿಗೆ ಒಪ್ಪಿಕೊಂಡವು. ನಾಯಿಯ ಕಾವಲು ತಪ್ಪಿದ ಕೂಡಲೇ ಕುರಿ ಗಳು ಅನಾಯಾಸವಾಗಿಯೇ ಪ್ರಾಣಕ್ಕೆ ಎರವಾದವು."

ಜನರು ಈ ಕಥೆಯನ್ನು ಕೇಳಿ ಪರಿಸ್ಥಿತಿಯನ್ನು ಅರಿತರು; ಆದರೂ ಇಸೋಪನು ನಾನು ಕ್ರೀಸಸನ ದರಬಾರದಲ್ಲಿದ್ದು ನಿಮ್ಮ ಕಲ್ಯಾಣವನ್ನು ಹೆಚ್ಚಿಗೆ ಮಾಡುತ್ತೇನೆಂದು

ಹೇಳಿ ಜನರ ಮುಂಚಿನ ಆಲೋಚನೆಯ ಪ್ರಕಾರ ಲೀಡಿಯಾ ದೇಶದ ರಾಜಧಾನಿಯಾದ ಸಾರ್ಡಿಸರ ಪಟ್ಟಣಕ್ಕೆ ತೆರಳಿದನು.

ಕ್ರೀಸಸನು ಬಹು ಜನ ವಿದ್ವಾಂಸರಿಗೆ ಆಶ್ರಯವನ್ನು ಕೊಡುತ್ತಿದ್ದನು. ಅವನ ದರಬಾರದಲ್ಲಿ ಎಷ್ಟೋ ಜನ ತತ್ವಜ್ಞಾನಿಗಳು ಇದ್ದರು. ಇಸೋಪನು ಅವನ ದರಬಾರಕ್ಕೆ ಹೋದ ಬಳಿಕ ಆ ತತ್ವಜ್ಞಾನಿಗಳ ಸಂಗಡ ವಾದ ಮಾಡಿ ಗೆದ್ದನು. ದರಬಾರದ ಜನರು ಇಸೋಪನ ಚಾತುರ್ಯವನ್ನು ಬಹಳವಾಗಿ ಕೊಂಡಾಡಿದರು. ಅರಸನು ಇಸೋಪನಿಗೆ ರಾಜ್ಯಕಾರಭಾರದೊಳಗಿನ ಒಳ್ಳೇ ಜವಾಬದಾರಿಯ ಸೂಕ್ಷ್ಮ ಕೆಲಸವನ್ನು ಒಪ್ಪಿಸಿದನು. ಈ ಕೆಲಸ ಮಾಡುತ್ತಿರುವಾಗ ಇಸೋಪನು ಗ್ರೀಸ ದೇಶದೊಳಗಿನ ಸುಂದರವಾದ ಎಲ್ಲ ಪಟ್ಟಣಗಳಲ್ಲಿಯೂ ತಿರುಗಾಡಿದನು. ಇಸೋಪನ ನೀತಿಯ ಕಥೆಗಳೆಂದು ಪ್ರಸಿದ್ಧವಾಗಿರುವ ಅನೇಕ ಕಥೆಗಳನ್ನು ಅವನು ಕ್ರೀಸಸನ ದರಬಾರದಲ್ಲಿರುವಾಗಲೇ ರಚಿಸಿದನು.

ಮುಂದೆ ಒಮ್ಮೆ ಇಸೋಪನು ಈ ಕ್ರೀಸಸನ ಅಪ್ಪಣೆಯ ಮೇರೆಗೆ ಡೇಲ್ಫಿ ಎಂಬಲ್ಲಿಯ ದೇವಾಲಯದ ಉಪಾಧ್ಯಾಯರಿಗೆ ಕೆಲವು ದಕ್ಷಿಣೆಗಳನ್ನು ಕೊಡುವದಕ್ಕಾಗಿ ಹೋದಾಗ ಆ ಉಪಾಧ್ಯಾಯರ ವರ್ತನವನ್ನು ಕಂಡು ಸಂತಾಪಗೊಂಡು—"ಈ ದಕ್ಷಿಣೆಗಳನ್ನು ಸ್ವೀಕರಿಸುವ ಯೋಗ್ಯತೆಯು ನಿಮ್ಮಲ್ಲಿ ತಿಲಾಂಶವಾದರೂ ಇರುವದಿಲ್ಲ; ಆದಕಾರಣ ನಾನು ನಿಮಗೆ ಏನೂ ಕೊಡಲಾರೆನು" ಎಂದು ಹೇಳಿ ಅಲ್ಲಿಂದ ತಿರುಗಿ ಹೊರಡಲು ಸಿದ್ಧನಾದನು. ಆಗ ಆ ಉಪಾಧ್ಯಾಯರು ಅರಸನು ಕೊಟ್ಟ ಕಾಣಿಕೆಗಳನ್ನು ಕೊಡುವದರಲ್ಲಿ ನಿನ್ನ ಹಿರೇತನವೇನೆಂದು ಸಿಟ್ಟಾಗಿ ಅವನನ್ನು ಜುಲುಮೆಯಿಂದ ಹಿಡಿದು ಕಾಣಿಕೆಯ ಹಣವನ್ನು ಕಸಕೊಂಡು, ಇಸೋಪನನ್ನು ಕೊಂದುಹಾಕಿದರು; ಆ ಕಾಲಕ್ಕೆ ಅವನು ಅವರಿಗೆ ಉಪದೇಶಪರವಾದ ಎಷ್ಟೋ ನೀತಿಯ ಕಥೆಗಳನ್ನು ಹೇಳಿದನು. ಆದರೆ ಅದೆಲ್ಲ ಡಬ್ಬಗೊಡದ ಮೇಲೆ ನೀರು ಸುರುವಿದಂತೆ ಆಯಿತು. ಆದರಲ್ಲಿಯ ಒಂದು ಕಥೆಯು ಬಹುಶಃ ಯಾವ ಪುಸ್ತಕದಲ್ಲಿಯೂ ಇರುವದಿಲ್ಲ. ಅದನ್ನು ಇಲ್ಲಿ ಕೊಡುವೆವು :

"ಒಂದಾನೊಂದು ಕಾಲಕ್ಕೆ ಒಂದು ಗುಂಗೀಹುಳಕ್ಕೂ ಗರುಡಪಕ್ಷಿಗೂ ಬಹಳ ಹಗೆತನ ಬಿತ್ತು. ಮೊದಲು ಗರುಡಪಕ್ಷಿಯು ಗುಂಗೀಹುಳದ ತತ್ತಿಗಳನ್ನು ತಿಂದುಬಿಟ್ಟಿತು. ಬಳಿಕ ಗುಂಗೀಹುಳವು ಗರುಡಪಕ್ಷಿಯು ಗೂಡಿನಲ್ಲಿ ಇಲ್ಲದ ಸಮಯವನ್ನು ಸಾಧಿಸಿ ಅದರ ಗೂಡನ್ನು ನಾಶ ಮಾಡಿ ತತ್ತಿಗಳನ್ನು ಕೆಡವಿ ಒಡೆದುಬಿಟ್ಟಿತು. ಗರುಡಪಕ್ಷಿಯು ಜುಪಿತರ (ದೇವರು)ನ ಬಳಿಗೆ ದೂರು ಹೇಳಿತು. ಆಗ ಜುಪಿತರನು—ನನ್ನ ತೊಡೆಯ ಮೇಲೆ ನಿನ್ನ ಗೂಡು ಕಟ್ಟಿ ಅದರಲ್ಲಿ ನಿನ್ನ ತತ್ತಿಗಳನ್ನು ಇಕ್ಕು ಎಂದು ಹೇಳಿದನು. ಗರುಡಪಕ್ಷಿಯು ಹಾಗೇ ಮಾಡಿತು. ಈ ಸುದ್ದಿಯು ಗುಂಗೀಹುಳಕ್ಕೆ ತಿಳಿದ ಕೂಡಲೆ

ಅದು ಜುಪಿತರನ ಕಿವಿಯ ಹತ್ತಿರ 'ಗುಂಯಿ, ಗುಂಯಿ, ಗುಂಯಿ' ಸಪ್ಪಳ ಮಾಡಿ ಅವನ ಮನಸ್ಸಿಗೆ ಬಹಳ ಸಂತಾಪವನ್ನು ಕೊಟ್ಟಿತು. ಅತಿ ಸಂತಾಪದಿಂದ ತನ್ನ ತೊಡೆಯ ಮೇಲೆ ತತ್ತಿಗಳಿರುವವೆಂಬ ಎಚ್ಚರಿಕೆ ಉಳಿಯದೆ ಗುಂಗೀಹುಳವನ್ನು ಹೊಡೆಯುವ ಉದ್ದೇಶದಿಂದ ಜುಪಿತರನು ಚಟ್ಟನೆ ಎದ್ದನು. ಅದರಿಂದ ಗರುಡಪಕ್ಷಿಯ ತತ್ತಿಗಳು ಸಹಜವಾಗಿಯೇ ಒಡೆದುಹೋದವು." ಇಸೋಪನು ಈ ಕಥೆಯನ್ನು ತೀರ ಪ್ರಾಣಬಿಡುವ ಸಮಯದಲ್ಲಿ ಹೇಳಿ ಅವರಿಗೆ– "ನೀವು ನನ್ನನ್ನು ಕೊಂದು ಒಳ್ಳೇ ಪೌರುಷವನ್ನು ಮಾಡಿದೆವೆಂದು ತಿಳಿಯಬೇಡಿರಿ. ಇದರ ಪ್ರಾಯಶ್ಚಿತ್ತವು ನಿಮಗಾಗದೆ ಇರುವದಿಲ್ಲ. ಅದು ಸಹಜವಾಗಿಯೇ ಆಗುವದು ಮತ್ತು ಒಳ್ಳೇ ಭಯಂಕರವಾಗಿ ಆಗುವದು" ಎಂದು ಸೂಚಿಸಿದನು. ಮುಂದೆ ಸ್ವಲ್ಪ ಕಾಲದಲ್ಲಿ ಇದರಂತೆಯೇ ಆಯಿತು. ಡೇಲ್ಫಿ ಎಂಬಲ್ಲಿಯ ಜನರ ಮೇಲೆ ದೊಡ್ಡದೊಂದು ಸಂಕಟವು ಪ್ರಾಪ್ತವಾಯಿತು. ಆ ಸಂಕಟದ ನಿವಾರಣ ಕ್ಕಾಗಿ ಇಸೋಪನನ್ನು ಕೊಂದು ಅಪಹರಿಸಿದ ದುಡ್ಡಿನ ಸಾವಿರಪಟ್ಟು ಹಣವನ್ನು ದಂಡ ವಾಗಿ ತೆರಬೇಕಾಯಿತು. ಈ ರೀತಿಯಿಂದ ಚತುರನೂ ಬುದ್ಧಿಶಾಲಿಯೂ ಆದ ಇಸೋಪನು ಮರಣ ಹೊಂದಿದನು. ಭವಿತವ್ಯವು ಯಾರಿಗೂ ತಪ್ಪಿಲ್ಲ!!

ಇಸೋಪನು ಮರಣದ ತರುವಾಯ ಎರಡು ನೂರು ವರ್ಷಗಳಾದ ಮೇಲೆ ಅಥೆನ್ಸದ ನಿವಾಸಿಗಳು ಒಳ್ಳೇ ಕುಶಲನಾದ ಕಾರಾಗೀರನಿಂದ ಅವನದೊಂದು ಮೂರ್ತಿ ಯನ್ನು ಮಾಡಿಸಿ ಪಟ್ಟಣದೊಳಗಿನ ಒಂದು ಸುಪ್ರಸಿದ್ಧವಾದ ಸ್ಥಳದಲ್ಲಿ ಅದನ್ನು ಸ್ಥಾಪಿಸಿದರು.

ಇಸೋಪನ ಮದುವೆಯಾಗಿತ್ತು. ಆದರೆ ಅವನಿಗೆ ಸಂತತಿಯು ಆಗಲಿಲ್ಲ. ಅವನು ಒಬ್ಬ ಹುಡುಗನನ್ನು ದತ್ತಕ ತೆಗೆದುಕೊಂಡಿದ್ದನು. ಆದರೆ ಅವನು ಮೂರ್ಖನೂ ಕೃತಘ್ನನೂ ಆಗಿದ್ದನೆಂದು ಒಂದು ಕಡೆಗೆ ಆಧಾರವು ದೊರೆಯುತ್ತದೆ. ಆದರಿಂದ ಇಸೋಪನ ಮನಸಿಗೆ ಸಮಾಧಾನವೇನೂ ಆಗಲಿಲ್ಲ. ಇಸೋಪನು ತನ್ನ ಮಗನಿಗೆ ಮಾಡಿದ ಉಪದೇಶವು ಒಂದು ಪುಸ್ತಕದಲ್ಲಿ ಬರೆದಿದೆ. ಆ ಉಪದೇಶವು ಎಲ್ಲರಿಗೂ ಓದ ಲಿಕ್ಕೆ ತಕ್ಕದ್ದಾಗಿರುವದು. ಅದನ್ನು ಇಲ್ಲಿ ಕೊಡುವೆವು.

## ಇಸೋಪನು ತನ್ನ ಮಗನಿಗೆ ಮಾಡಿದ ಉಪದೇಶವು

"ಮಗನೇ, ಈಶ್ವರನ ಭಕ್ತಿಯನ್ನು ಮನಸಿನಲ್ಲಿ ಪೂಜ್ಯ ಬುದ್ಧಿಯನ್ನು ಇಟ್ಟು ಕೊಂಡು, ಒಳ್ಳೇ ಮನಃಪೂರ್ವಕವಾಗಿಯೂ ಎಚ್ಚರಿಕೆಯಿಂದಲೂ ಮಾಡತಕ್ಕದ್ದು. ಈ ವಿಷಯದಲ್ಲಿ ಡಾಂಭಿಕತನವು ಎಳ್ಳಷ್ಟಾದರೂ ಇರಕೂಡದು. ದೇವರೂ ಆತನ ಶಕ್ತಿಗಳೂ ಕೇವಲ ಚಿಕ್ಕ ಮಕ್ಕಳನ್ನು ಹೆದರಿಸಲಿಕ್ಕೆ ಕಲ್ಪಿಸಿದವುಗಳೆಂದು ತಿಳಿಯಬೇಡ. ದೇವರು ಸತ್ಯನೂ, ಸರ್ವಜ್ಞನೂ, ಸರ್ವಶಕ್ತಿವಂತನೂ ಆಗಿರುವನು."

"ತೀರ ಅಂತಸ್ಥವಾಗಿರುವಂಥ ರಹಸ್ಯದ ನಿಮ್ಮ ವಿಚಾರಗಳೂ ಕೆಲಸಗಳೂ ಕೂಡ ಯಾವಾಗಲೂ ಶುದ್ಧವಾಗಿರುವಂತೆ ಎಚ್ಚರಪಡುತ್ತಿರಬೇಕು; ಯಾಕಂದರೆ ಅವು ಪಾಮರರಾದ ಮನುಷ್ಯರಿಗೆ ಕಾಣದಿದ್ದರೂ ಸರ್ವಜ್ಞನಾದ ಪರಮೇಶ್ವರನಿಗೆ ಕಂಡೇ ಕಾಣುತ್ತವೆ."

"ತನ್ನ ಮಕ್ಕಳು ತನಗೆ ಯಾವ ತರದ ಮಾನವನ್ನು ಕೊಡಬೇಕೆಂದು ತಾನು ಇಚ್ಛಿಸುವನೋ ಅದೇ ತರದ ಮಾನವನ್ನು ನೀನು ನಿನ್ನ ತಾಯಿತಂದೆಗಳಿಗೆ ಕೊಡುವದರಲ್ಲಿ ಬುದ್ಧಿವಂತಿಕೆಯೂ ಸ್ವಾಭಾವಿಕತನವೂ ಇರುವದು."

"ತನಗೆ ಶಕ್ಯವಿದ್ದಷ್ಟು ಮಟ್ಟಿಗೆ ಪರರಿಗೆ ಒಳಿತು ಮಾಡಲಿಕ್ಕೆ ಹೆಣಗುತ್ತಿರಬೇಕು; ವಿಶೇಷವಾಗಿ ತಮ್ಮ ಮಿತ್ರರ ಬಂಧುಬಳಗದವರ ಹಿತಕ್ಕಾಗಿ ಯಾವಾಗಲೂ ಯತ್ನ ಮಾಡುತ್ತಿರಬೇಕು. ಯಾರ ಒಳಿತು ಮಾಡುವದು ತಮ್ಮ ಕೈಯಲ್ಲಿರುವದಿಲ್ಲವೋ ಅವರಿಗೆ ಕೆಡಕನ್ನಾದರೂ ಮಾಡಬಾರದು."

"ನಿನ್ನ ಸದಸದ್ವಿವೇಕ ಶಕ್ತಿಯ ಪ್ರೇರಣೆಯಂತೆ ನಡೆದರೆ ನಿನಗೆ ಈ ಜಗತ್ತಿನಲ್ಲಿ ಯಾವ ತೊಂದರೆಯೂ ಸಂಭವಿಸಲಿಕ್ಕಿಲ್ಲ."

"ನಿನ್ನ ಸದಸದ್ವಿವೇಕ ಶಕ್ತಿಯು ಹೇಳಿದಂತೆ ನೀನು ನಡೆದರೆ ನಿನಗೆ ಯಾತರ ಬಗ್ಗೆಯೂ ಚಿಂತೆ ಮಾಡುವ ಕಾರಣವು ಉಳಿಯಲಿಕ್ಕಿಲ್ಲ."

"ಈ ಜಗತ್ತಿನಲ್ಲಿ ನಿನಗೆ ಶಕ್ಯವಿದ್ದಷ್ಟು ಮಟ್ಟಿಗೆ ನೀನು ಯಾವಾಗಲು ಕಲಿಯುತ್ತಿರು. ಸೋಮಾರಿತನದಿಂದ ಕಾಲವನ್ನು ಕಳೆಯಬೇಡ. ಧನಕ್ಕಿಂತ ಒಳ್ಳೇ ಉಪದೇಶದ ಬೆಲೆಯು ಬಹಳ ಹೆಚ್ಚಿರುವದೆಂಬ ಮಾತನ್ನು ಲಕ್ಷದಲ್ಲಿಡು."

"ಹೊಲವನ್ನು ಹರಿಗಿ ಹಸನು ಮಾಡುವಂತೆಯೇ ಮನಸ್ಸನ್ನೂ ಹಸನು ಮಾಡಲಿಕ್ಕೆ ಬೇಕು. ಯಾಕಂದರೆ ಮನಸ್ಸು ಹೆಚ್ಚು ಹೆಚ್ಚು ಶುದ್ಧವಾದಂತೆ ನಮ್ಮಲ್ಲಿ ದೈವಿಕ ಶಕ್ತಿಯು ಪ್ರಾಪ್ತವಾಗುತ್ತ ಹೋಗುವದು; ಆದರೆ ಮನಸ್ಸಿನ ಶುದ್ಧತೆಯು ಕಡಿಮೆ ಕಡಿಮೆಯಾದಂತೆ ನಮ್ಮಲ್ಲಿ ಪಶುತ್ವವು ನೆಲೆಗೊಳ್ಳುವದು."

"ಈ ಜಗತ್ತಿನಲ್ಲಿ ಬುದ್ಧಿವಂತಿಕೆ, ಒಳ್ಳೇ ನಡತೆ ಇವೆರಡರಂಥ 'ನಿತ್ಯ' ಪದಾರ್ಥಗಳು ಬೇರೆ ಯಾವವೂ ಇಲ್ಲ. ಆದರೆ ಅವೆರಡರಿಂದ ಹಿತ ಉಂಟೆಂದು ಬರೇ ತಿಳಿದ ಮಾತ್ರದಿಂದ ಕೆಲಸವಾಗಲಿಲ್ಲ. ಆದರೆ ಅವುಗಳ ಪರಿಣಾಮವು ವರ್ತನದಲ್ಲಿ ತೋರಲಿಕ್ಕೆ ಬೇಕು."

" ದುರ್ಗುಣಗಳು ಇಲ್ಲದಿರುವದೊಂದು ಸದ್ಗುಣವೇ ಆಗಿರುವದು. "

" ಎಲ್ಲರ ಮೇಲೆಯೂ ವಿಶ್ವಾಸವಿರಬೇಕು; ಆದರೆ ಸುಳ್ಳು ಮಾತಾಡುವದನ್ನು ತೀರ ಬಿಟ್ಟು ಬಿಡಲಿಕ್ಕೆಬೇಕು. ಯಾಕಂದರೆ ಅವನಷ್ಟು ಪಾಪಿಷ್ಟನು ಈ ಜಗತ್ತಿನಲ್ಲಿ ಬೇರೆ ಯಾವನೂ ಅಲ್ಲ.

" ಸತ್ಸಹವಾಸದಿಂದ ಆನಂದ ಪಡಬೇಕು. ಯಾಕಂದರೆ ಕೇವಲ ಅವನ ಅನುಕರಣ ಮಾಡುವದರಿಂದಲೇ ನಮ್ಮ ಕಲ್ಯಾಣವಾಗುತ್ತದೆ. "

"ಕೆಡಕಿನಿಂದಲೂ ಒಳ್ಳೇ ಸಂಗತಿಗಳು ಹೊರಡುತ್ತಿರುತ್ತವೆ, ಎಂದು ಜನರು ಅನ್ನುತ್ತಿರುತ್ತಾರೆ. ಆದರೆ ಆ ಮಾತು ಸಂಪೂರ್ಣವಾಗಿ ನಿಜವಿರುವದಿಲ್ಲ. 'ಈ ಬಗೆಯ ಮೋಸ ಮಾಡುವದು ಲಾಭದಾಯಕವಿರುತ್ತದೆ.' ಸಾವಿರ ಸುಳ್ಳು ಹೇಳಿ ಒಂದು ಕಲ್ಯಾಣ ಕಟ್ಟಲಿಕ್ಕೆ ಅಡ್ಡಿಯಿಲ್ಲ, ಅದು ಕೆಡಕೆನಿಸದು, ಎಂದು ಹೇಳುವವರ ಗಾಳಿಗೆ ಸಹ ನಿಲ್ಲಬೇಡ; ಯಾಕಂದರೆ ಈ ಜಗತ್ತಿನಲ್ಲಿ ಒಳ್ಳೇದೆಂಬುದು ಎಷ್ಟಿರುವದೋ, ಕೆಡಕು ಯಾವದು ಅಲ್ಲವೋ ಅದೆಲ್ಲ 'ಸದ್ಗುಣದಲ್ಲಿಯೇ' ಇರುವದೆಂದು ದೃಢವಾಗಿ ನಂಬು."

"ಪ್ರತಿಯೊಬ್ಬ ಮನುಷ್ಯನು ತನ್ನ ಕೆಲಸವನ್ನು ಮಾಡತಕ್ಕದ್ದು; ಪರರ ಕೆಲಸದಲ್ಲಿ ನಿಷ್ಕಾರಣವಾಗಿ ಕೈಹಾಕಬಾರದು; ಯಾರ ನಿಂದೆಯನ್ನೂ ಮಾಡಬಾರದು; ಒಬ್ಬರು ಮತ್ತೊಬ್ಬರ ನಿಂದೆಯನ್ನು ತಮ್ಮ ಮುಂದೆ ಮಾಡಿದರೆ ಅದನ್ನು ಕಿವಿಯ ಮೇಲೆ ಹಾಕಿಕೊಳ್ಳಬಾರದು. ಯಾಕಂದರೆ ಈ ಪರನಿಂದೆಯನ್ನು ಕೇಳುವ ರೂಢಿಯಾಯಿತೆಂದರೆ ಆ ಮನುಷ್ಯನ ನಾಲಿಗೆಗೆ ಪರನಿಂದೆಯನ್ನು ಮಾಡುವ ರೂಢಿಯು ಸಹಜವಾಗಿಯೇ ಆಗುವದು."

"ಉದ್ದೇಶವು ಒಳ್ಳೇದಿರಬೇಕು; ಪರರ ಉಪದೇಶವನ್ನು ಆದರಿಸಬೇಕು. ಆ ಬಳಿಕ ಈಶ್ವರನನ್ನು ಅವಲಂಬಿಸಬೇಕು."

"ದುಃಸ್ಥಿತಿಯು ಪ್ರಾಪ್ತವಾಯಿತೆಂದು ಖೇದಪಡಬಾರದು; ಒಳ್ಳೇ ಸ್ಥಿತಿಯು ಬಂತೆಂದು ಗರ್ವ ಪಡಬಾರದು; ಯಾಕಂದರೆ ಎಲ್ಲ ಸಂಗತಿಗಳಲ್ಲಿ ಸ್ಥಿತ್ಯಂತರವು ಇದ್ದೇ ಇರುವದು."

"ನಿತ್ಯದಲ್ಲಿಯೂ ಮುಂಜಾನೆ ಎದ್ದು ತಮ್ಮ ಕೆಲಸಕ್ಕೆ ತೊಡಗಬೇಕು. ಒಳ್ಳೇ ಸಂಗತಿಗಳನ್ನಷ್ಟು ಕಲಿತುಕೊಳ್ಳಬೇಕು; ಒಳ್ಳೆಯವರಿಗೆ ಕೈಲಾದ ಮಟ್ಟಿಗೆ ಉಪಕಾರ ಮಾಡಬೇಕು. ಈ ಮೂರು ಕೆಲಸಗಳನ್ನು ಮಾಡುತ್ತಿದ್ದರೆ ಪಶ್ಚಾತ್ತಾಪವನ್ನು ಹೊಂದುವ ಪ್ರಸಂಗವು ಎಂದೂ ಒದಗುವದಿಲ್ಲ."

"ವಿಲಾಸ, ತಿನಸುಬೊಕ್ಕತನ, ಸೆರೆಗುಡಕತನ ಈ ಮೂರು ಸಂಗತಿಗಳನ್ನು ಎಂದೂ ಮನಸಿನಲ್ಲಿ ಸಹ ತರಬೇಡ. ಯಾಕಂದರೆ ಮದ್ಯದಿಂದ ಬಹಳ ಅನರ್ಥಗಳು ಸಂಭವಿಸುವವು. ಮನುಷ್ಯನು ವಾರ್ಧಕ್ಯದಿಂದ ಹೇಗೋ ಹಾಗೆ ಮದ್ಯಪ್ರಾಶನದಿಂದಲೂ ಸಣ್ಣ ಹುಡುಗರಂತೆ ಅಲ್ಲದ ಚೇಷ್ಟೆಗಳನ್ನು ಮಾಡತೊಡಗುವನು."

"ಯಾವದೊಂದು ಕೆಲಸವನ್ನು ಮಾಡಲಿಕ್ಕೆ ತಕ್ಕ ಸಂಧಿಯು ಒದ..ವ ತನಕ ದಾರೀಕಾಯುತ್ತಿರು. ಅಯೋಗ್ಯ ವೇಳೆಯಲ್ಲಿ ಮಾಡಿದ ಕೆಲಸ[illegible] ಎಂದೂ ಒಳಿತಾಗುವದಿಲ್ಲ."

"ರಾಜರು, ರಾಜಪುತ್ರರು, ಅಧಿಕಾರಿಗಳು ಇವರ ವಿಷಯವಾಗಿ ಮನಸಿನಲ್ಲಿ ಬಹಳ ಆದರವನ್ನು ತಾಳು. ಯಾಕಂದರೆ ಅವರು ತಪ್ಪುಗಾರರಿಗೆ ಶಿಕ್ಷೆಯನ್ನು ವಿಧಿಸುವರು; ಹಾಗು ನಿರಪರಾಧಿಗಳನ್ನು ದುಷ್ಟರಿಂದ ಸಂರಕ್ಷಿಸುವರು."

o o o

# ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

## ೧೫ ಪುಷ್ಪಗಳ ಪ್ರಕಟಣೆ

| | | | |
|---|---|---|---|
| ೧ | ಪಂಡಿತರಾಜ ಜಗನ್ನಾಥ | ... | ೫-೦೦ |
| ೨ | ಕನ್ನಡಿಗರ ಜನ್ಮಸಾರ್ಥಕತೆ | ... | ೫-೦೦ |
| ೩ | ಕರ್ಣಾಟಕ ನರಕಾಸುರ ವಿಜಯ ವ್ಯಾಯೋಗಂ | ... | ೪-೦೦ |
| ೪ | ಕರ್ನಾಟಕ ಕಥಾಸರಿತ್ಸಾಗರ | ... | ೬-೦೦ |
| ೫ | ಶೌರ್ಯಸಾಗರ | ... | ೬-೦೦ |
| ೬ | ಕನ್ನಡವಮಾತು ತಲೆಯೆತ್ತುವ ಬಗೆ | ... | ೩-೦೦ |
| ೭ | ಕಾಲಿದಾಸ ಚರಿತ್ರ | ... | ೬-೦೦ |
| ೮ | ಕರ್ಣಾಟಕ ಯಯಾತಿ ನಾಟಕಂ | ... | ೮-೦೦ |
| ೯ | ಮೋಹಿನೀ ಅಥವಾ ನಿಂದಕರ ನಡವಳಿ | ... | ೧೦-೦೦ |
| ೧೦ | ಭಾರತೀಯ ವಿದುಷಿಯರು | ... | ೮-೦೦ |
| ೧೧ | ಶ್ರೇಯಃಸಾಧನ | ... | ೮-೦೦ |
| ೧೨ | ಗೃಹವೈದ್ಯಕವು | ... | ೮-೦೦ |
| ೧೩ | ಇಸೋಪನ ಚರಿತ್ರ | ... | ೩-೦೦ |
| ೧೪ | ವಿದ್ಯಾರಣ್ಯ ಸ್ವಾಮಿಗಳು | ... | ೧೦-೦೦ |
| ೧೫ | ನರಗುಂದದ ಬಂಡಾಯ | ... | ೧೦-೦೦ |

